
ಕೊರವಂಜಿ



Koravanji

ಡಿಸೆಂಬರ್

೧೯೫೮

★

ಸಂಪಾದಕರು

ಶ್ರೀ|| ರಾ. ಶಿ.

ಬರಹಗಾರರು :

ಶ್ರೀ ಕುಮಾರ್

ಶ್ರೀ ಪ್ರಸಾದ್

ಶ್ರೀ|| ರಾಮಿ

ಶ್ರೀ|| ಅ. ರಾ. ಸೆ.

ಶ್ರೀ|| ನಾ. ಕ.

ಶ್ರೀ|| ಕೇಫ

ಶ್ರೀ|| ದಾಶರಥಿ ದೀಕ್ಷಿತ್

ಶ್ರೀ|| ಶಿವರಾಮ ಕಾರಂತ

ಇತ್ಯಾದಿ, ಇತ್ಯಾದಿ.

ತಿಳಿನಗೆಯ ಮಾಸಪತ್ರಿಕ

ಬಿಡಿ ಪ್ರತಿ ಕೇವಲ ನಾಲ್ಕಾಣೆ


For 3 way Beauty Treatment....
RAJA
SNOW
AMLA HAIR OIL , KASTURI SOAP
MANYAM & CO. BANGALORE MADRAS MADURAI BOMBAY.



ಸಂಪುಟ ೧೮ ಡಿಸೆಂಬರ್ ೧೯೫೮ ಸಂಚಿಕೆ ೯

ಕುಹಕಿಡಿಗಳು

ಈ ಸಾರಿ ಮಕ್ಕಳ ದಿನಾಚರಣೆಯು ತಾಯ್ತುಂದೆಯಿಂದ ವೈಭವವಾಗಿ ಆಚರಿಸಲ್ಪಟ್ಟಿತಂತೆ.

* * *

ಬೊಂಬಾಯಿನಲ್ಲಿ ಹೂಡಿದ್ದದೊಂಬಿ ಪ್ರಕರಣವನ್ನೇ ಬೆಳಗಾವಿನಲ್ಲಿ ಮರಾಟಾ ಸೋದರರು, ಆಚರಿಸಿದರಂತೆ

—ಎಡವಿದ ಕಾಲೇ ಎಡವೋದು ಅಲ್ಲವೇ ?

* * *

ಪರರಾಷ್ಟ್ರದವರೆಲ್ಲಾ ಒಟ್ಟುಗೂಡಿ ನಮಗೆ ಕೊಡುಗೈ ಸಾಲ ಕೊಡುತ್ತಿರುವುದನ್ನು ನೋಡಿದರೆ

—ಒಂದಾನೊಂದು ದಿನ ಅಸಲು ಮತ್ತು ಬಡ್ಡಿಗಾಗಿ ದೇಶವನ್ನೇ ಮಾರಬೇಕಾಗುತ್ತೋ ಅನ್ನಿಸುತ್ತೆ.

* * *

ಸಕಾಲದಲ್ಲಿ ಸದುಪಯೋಗಪಡಿಸಿಕೊಳ್ಳದೆ ಆಡಳಿತ ವಿಳಂಬದಿಂದ ಕೊಟ್ಟ ಹಣವನ್ನು ಲ್ಯಾಪ್ಸ್ ಮಾಡಿಸುವ ಮೈಸೂರಿನವರು ಶರಾವತಿ ಯೋಜನೆಗೇಕೆ ಇಷ್ಟು ಬೊಬ್ಬೆ ಇಡುತ್ತಿದ್ದಾರೆ. ಎಂದು ಕೇಂದ್ರದವರಂದರಂತೆ !

—ಹೇಗೂ ಹಣ ಖರ್ಚಾಗುಲ್ಲ ಅಂತ ಧೈರ್ಯವಿದ್ದವರು. ಶರಾವತಿ ಯೋಜನೆಯನ್ನು ಒಪ್ಪಿಕೊಂಡರೆ ಅವರಿಗೇನೂ ನಷ್ಟವಿಲ್ಲವಲ್ಲ ! ! ಒಪ್ಪಿಕೊಳ್ಳಲಿ.

* * *

ಈ ಸಾರಿ ದೀಪಾವಳಿ ಹಬ್ಬದಲ್ಲಿ ರಕ್ಷಣಾ ಶಾಖೆಯ ಅಧಿಕಾರಿಗಳ ಮತ್ತು ಹಿರಿಯ ನಾಯಕರ ಮನೆಗಳಲ್ಲಿ ಮಾತ್ರ ಆಟಂ ಪಟಾಕಿಗಳನ್ನು ಹಾರಿಸಿದರಂತೆ.

* * *

ತಲೆಯೆತ್ತಿ ನಡೆಯಿರಿ ಎಂದು ಯುವಕರಿಗೆ ಪ್ರಧಾನಿಗಳು ಕರೆ ಇತ್ತಿದ್ದಾರೆ.

—ಆ ಟೋಪಿ ಹಾಕಿಕೊಂಡರೆ ತಲೆ ಹೇಗೆ ಎತ್ತಲು ಸಾಧ್ಯ ಎಂದು ಕೆಲವು ಯುವಕರ ಸಮಸ್ಯೆ.

* * *

ಬರ್ಮಾದ ಮಾಜಿ ಪ್ರಧಾನಿ ಊನೂ ಅವರು ತಲೆಗೆ ತಿರುಪತಿ ಮಾಡಿಸಿಕೊಂಡು ಕಾಷಾಯಾಂಬರವನ್ನುಟ್ಟು ಬೌದ್ಧ ವಿಹಾರವನ್ನು ಸೇರಿದರಂತೆ

—ನಮ್ಮ ಮಾಜಿಗಳು ಹೀಗೆ ಮಾಡಿದರೆ ದೇಶಕ್ಕೆ ಕ್ಷೇಮ !

* * *

ವಿಧಾನ ಸಭೆಯ ಈ ಅಧಿವೇಶನದಲ್ಲಿ ಸದಸ್ಯರು ನಿದ್ರೆ ಮಾಡಬಹುದು. ಆದರೆ ಗೊರಕೆ ಹುಯ್ಯಬಾರದು ಎಂದು ತೀರ್ಮಾನಿಸಲಾಯಿತಂತೆ

—ಮುಂದಿನ ಅಧಿವೇಶನದಲ್ಲಿ ಕೂತು ನಿದ್ರೆ ಮಾಡಬಹುದೋ, ಅಥವಾ ಮೇಜಿನ ಮೇಲೆ ಕಾಲೆಳೆದುಕೊಂಡು ನಿದ್ರಿಸಬಹುದೋ ಎನ್ನುವ ಬಗ್ಗೆ ತೀರ್ಮಾನವಾಗಬಹುದು.

* * *

ನೆರೆಹೊರೆ ರಾಷ್ಟ್ರಗಳಲ್ಲಿ ಸೈನ್ಯದಾಡಳಿತ ಬಂದಿರುವುದನ್ನು ನೋಡಿ ನಮ್ಮ ದೇಶದಲ್ಲೂ ಹೀಗೆ ಆಗಬಹುದೇ ಎಂಬ ಅನುಮಾನ ಬರುವುದು ಸಹಜ

—ಆದರೆ ಹಾಗಾಗುವುದಿಲ್ಲ ! ಸೈನ್ಯದ ಐಕಮತ್ಯ ಅಷ್ಟರಮಟ್ಟಿಗಿಲ್ಲ ; ;

* * *

ಭಾರತದಲ್ಲಿ ಪ್ರಥಮ ಬಾರಿಗೆ ರಾಕೆಟ್ಟನ್ನು ಮೈಸೂರಲ್ಲಿ ಯುವಕರಿಬ್ಬರು ಯಶಸ್ವಿಯಾಗಿ ಹಾರಿಸಿದರಂತೆ

—ಇಬ್ಬರು ಯುವಕರೂ ವಿಶ್ವವಿದ್ಯಾಲಯದ ಪರೀಕ್ಷೆಗಳಲ್ಲಿ ನಪಾಸಾದವರೇ ಇರಬೇಕು.—ಇನ್ನೂ ಯೋಚನಾಶಕ್ತಿ ಇರುವುದರಿಂದ.

* * *

ಕೈಲಾಸಂರವರ ಸೂಳೆ ನಾಟಕದಲ್ಲಿ ಪುಟ್ಟಮಗಳು ಮಾತಾ Nasty—ಪಿತಾ Nasty—Nasty ಬಂಧು ಇತ್ಯಾದಿ Nasty ವಿಷಯಗಳನ್ನು ಎಷ್ಟು ಮುದ್ದಾಗಿ ಅರ್ಥವತ್ತಾಗಿ ಹೇಳುತ್ತಾಳೆ ಅಲ್ಲವೇ ?

—ಆದರೆ ಮಾತಾ ಮಗಳನ್ನು ಕೊಂದು Nasty ಆಗಲಿಲ್ಲ ಕಡೆಗೆ!!

ಉರಿಗಾಳು

ತಾನು ಕೂಗಿದರೇನೇ ಬೆಳಗಾಗುವುದು, ಎಂದು ಶ್ರೀ ಮಾನ್ ಡಲ್ಲೆಸರು ಮತ್ತೊಂದು ಬಾರಿ, ಪೊಮೋರ್ಸಾ ಸಮ್ಮೇಳನದಿಂದ, ಜಗತ್ತಿಗೆ ಸಾರಿದ್ದಾರೆ. (ಪತ್ರಿಕೆ) ಆದರೆ ಚ್ಯಾಂಗ್‌ಕೈಷೇಕರು ಕೂಗಿದರೇನೇ ತಾನು ಕೂಗುವುದು ಎಂಬ ಪ್ರತಿಜ್ಞೆಯನ್ನು ಡಲ್ಲೆಸರು ಇನ್ನೂ ಮುರಿದಿಲ್ಲ.

* * *

ಆಟಂಬಾಂಬುಗಳನ್ನು, ಯಾರು ನಿಷೇಧಿಸದೆ ಇದ್ದರೂ, ಭಾರತ ಸರ್ಕಾರ ದೀಪಾವಳಿ ಪ್ರಯುಕ್ತ ನಿಷೇಧಿಸಿ, ಕೀರ್ತಿಗಳಿಸಿದೆ.

* * *

ಕಾಲೇಜುಗಳನ್ನು ಮುಚ್ಚಬೇಕು, ಇಲ್ಲದಿದ್ದರೆ ಮುಷ್ಕರ ಹೂಡುತ್ತೇವೆ, ಎಂಬ ವಿದ್ಯಾರ್ಥಿ ಚಳುವಳಿಗೆಲ್ಲ ಕಿರೀಟ ಪ್ರಾಯವಾಗಿದೆ, ಕಾಶಿಯಲ್ಲಿ ಹುಡುಗರು ವಿಶ್ವವಿದ್ಯಾಲಯವನ್ನೇ ಮುಚ್ಚಿಸಿ ಮೆರೆಯುತ್ತಿರುವುದು !

* * *

ಥಾಯಿಲ್ಯಾಂಡ್‌ನಲ್ಲೂ ಸೈನ್ಯದ ವಶಕ್ಕೊಪ್ಪಿಸಲಾಯಿತಂತೆ, ಆಡಳಿತ ಸೂತ್ರವನ್ನು (ಸುದ್ದಿ) ನಮ್ಮಲ್ಲಿ ಅದು ಇನ್ನೂ ಹೈ ಕಮ್ಯಾಂಡ್ ಕೈಯಲ್ಲೇ ಇದೆ, ಸದ್ಯಃ.

* * *

ಆಕಾಶವಾಣಿಯಲ್ಲಿ ವಿವಿಧ ಭಾರತ ಕಾರ್ಯಕ್ರಮ ಪ್ರಾರಂಭಮಾಡಿರುವುದರಿಂದ ಅನೇಕರು ರೇಡಿಯೋ ಸಿಲೋನ್ ರೇಡಿಯೋ ಪಾಕಿಸ್ತಾನ್ ಇತ್ಯಾದಿ ಕಾರ‍್ಯಕ್ರಮ ಕೇಳುವುದು ನಿಂತಿದೆ (ವರದಿ) ಹೌದು ! ಸೆಟ್ ಸೆಟ್ಟನ್ನೇ ಮಾರಿಬಿಟ್ಟಿದಾರೆ, ನಮ್ಮ ಸ್ನೇಹಿತರನೇಕರು, ಬೇಜಾರು ಪಟ್ಟು

* * *

ಮೆಟ್ರಿಕ್ ಪದ್ಧತಿಯನ್ನು ಬೋಧಿಸುವ ಸಲುವಾಗಿ ತಮಗೆ ತಿಂಗಳೊಂದಕೆ ಹತ್ತು ನಯಾ ಪೈಸಾ ಹೆಚ್ಚು ಪಗಾರ ಕೊಡಿಸಬೇಕೆಂದು ಉಪಾಧ್ಯಾಯರನೇಕರಕ್ಕೆ ಮನವಿ ಮಾಡಿರುವರಂತೆ.... ಕೇಂದ್ರ ಸರ್ಕಾರ ಹಣ ಒದಗಿಸಿದಕೂಡಲೇ, ಇದಕ್ಕೆ ಗಮನ ಕೊಡಲಾಗುವುದು ಎಂಬ ಉತ್ತರ ಬಂದಿದೆಯಂತೆ.

* * *

ಚ್ಯಂಗ್ ಕೈ ಷೇಕನ್ನು ಉಪೇಕ್ಷೆಮಾಡಿ ಅಮೇರಿಕಾ ಉಳಿಯುವಂತೆಯೇ ಇಲ್ಲ (ಭಾಷಣ) ಅಯ್ಯೋ! ಕಂಠಗತ ಪ್ರಾಣವೆ ?

* * *

ವಾಕ್ ಔಟ್ ಮಾಡಲು ಅನುಕೂಲವಾಗುವಂತೆ, ಪ್ರತಿ ಎಂ. ಎಲ್. ಎ. ಸೀಟಿನ ಕೆಳಕ್ಕೂ ಒಂದು ಮ್ಯಾನ್-ಹೋಲ್ ಸಿದ್ಧಪಡಿಸಬೇಕೆಂದು ಇಂಜಿನೀರಿಂಗ್ ಇಲಾಖೆ ವಿಧಾನ ಸೌಧದ ಅಧಿಕಾರಿಗಳಿಗೆ ಸಲಹೆಮಾಡಿರುವರಂತೆ.

* * *

ಬೆಂಗಳೂರಲ್ಲಿ ನಾಯಿಗಳ ಬೊಗುಳಾಟ ಜಾಸ್ತಿಯಾಗಿದೆ ಎಂಬ ಪುಕಾರು ಎದ್ದಿದೆ....ಅವಕ್ಕೆಲ್ಲ ಕಡುಬು ಎಸೆಯಲು ಸದ್ಯಕ್ಕೆ ಸಾಧ್ಯವಿಲ್ಲವೆಂದು ಅಧಿಕೃತ ವಲಯಗಳಲ್ಲಿ ಹೇಳಿಕೆ ಈಯಲಾಗಿದೆ.

* * *

ರಾಜಕೀಯ ಬಣಗಳನ್ನು ನಿರ್ಮಿಸಿ ಬೆಳೆಸಿ ಉಳಿಸಿ ಅವುಗಳಿಂದ ಜನ ಮನಕ್ಕೆ ಹುಚ್ಚು ಹಿಡಿಸುವುದು ಹೇಗೆ, ಎಂಬ ಶಾಸ್ತ್ರವನ್ನು ವ್ಯಾಸಂಗಮಾಡಲು ಇಚ್ಛೆ ಉಳ್ಳವರೆಲ್ಲರಿಗೂ ಬೆಂಗಳೂರಿಗೆ ಆದರದ ಆಹ್ವಾನವಿದೆ ಎಂದು ನಗರ ಪಿತೃಗಳೊಬ್ಬರು ಹೇಳಿಕೆ ಇತ್ತಿದ್ದಾರೆ.

* * *

ಕೃಷ್ಣರಾಜೇಂದ್ರ ಮಾರ್ಕೆಟ್ ಮುಂದಿನ ಅಂಗಳದಲ್ಲಿ ಆಗಲೇ ಕಿತ್ತೂರು ಚೆನ್ನಮ್ಮನ ಒಂದು ಕಂಚು ವಿಗ್ರಹವಿದೆಯಲ್ಲ, ಎಂದು ನಗರ ಪಿತೃಗಳೊಬ್ಬರು ವಾದಿಸಿದಾಗ, ಅದು ವಿಕ್ಟೋರಿಯಾರಾಣಿಯ ವಿಗ್ರಹವೇ ಹೊರತು, ಚೆನ್ನಮ್ಮನ ನವರದಲ್ಲ, ಎಂದು ಮತ್ತೊಬ್ಬರು ತಿದ್ದಿ, ಎಲ್ಲರ ಮೆಚ್ಚುಗೆಗೂ ಪಾತ್ರರಾದರಂತೆ.

* * *

ಬಾಹ್ಯಾಂತರಿಕ್ಷದ ಹಕ್ಕು ಸ್ಥಾಪಿಸಲು ಅಮೇರಿಕಾದವರು ಯೋಜನೆ ಮಾಡುತ್ತಿದ್ದಾರಂತೆ.

—ಇವರು ಮುಗಿಸುವ ಹೊತ್ತಿಗೆ ರಷ್ಯಾದವರು ಆಕ್ರಮಿಸಿಕೊಂಡೇ ಬಿಟ್ಟಿರುತ್ತಾರೇನೋ ?

* * *

ಮೈಸೂರು ಅಸೆಂಬ್ಲಿಯಲ್ಲಿ ಶರಾವತಿ ಯೋಜನೆಯ ವಿಚಾರವಾದವೆದ್ದಾಗಲೇ —ವಿದ್ಯುಚ್ಛಕ್ತಿ ಉತ್ಪಾದನೆಯಾದಷ್ಟು ತೀವ್ರವಾದ ಠರಾವು ಪಾಸಾಯಿತಂತೆ !

ಕೊರವನ ಜಾದೂ

ಹೊಸ ವರ್ಷದ ಚುನಾವಣೆಗಳಾದ ತರುಣದಲ್ಲೇ ಸ್ವಾತಂತ್ರ್ಯೋತ್ಸವದ ದಿನವೂ ಬಂದಿತು. ಹೊಸ ಕಾರ್ಯದರ್ಶಿಯ ಹುರುಪು ಕೇಳಬೇಕೆ? ಸ್ವಾತಂತ್ರ್ಯೋತ್ಸವದ ರಾತ್ರಿ ಭೋಜನ ಕೂಟವನ್ನು ಏರ್ಪಡಿಸಿದ, ನಮ್ಮ ಕ್ಲಬ್ಬಿನಲ್ಲಿ. ಸಂಜೆ ಬಲಿತವರ ನೃತ್ಯ ಕಾರ್ಯಕ್ರಮವನ್ನು ಏರ್ಪಡಿಸಿದ. ಕ್ಲಬ್ಬಿನ ಸದಸ್ಯರ ಹೀಚು ಹೆಣ್ಮಕ್ಕಳ ನೃತ್ಯವೇ ಆಗಿನ ತನಕ ರೂಢಿಯಲ್ಲಿದ್ದುದು, ನರ್ತಿಸುವ ಚಿಕ್ಕ ಹುಡುಗಿಯ ತಂದೆ ತಾಯಂದಿರು, ಅವರಿಗೆ ತುಂಬಾ ಖುಣಿಯಾದ ಸದಸ್ಯರುಗಳು, ಇಷ್ಟು ಜನರನ್ನು ಬಿಟ್ಟರೆ, ಕ್ಲಬ್ಬಿನ ಮಿಕ್ಕ ಸದಸ್ಯರಿಗೆಲ್ಲಾ ತಲೇನೋವು ಬರಿಸುವ ರೀತಿ ಈ ನಾಚ್ ಪ್ರದರ್ಶನ. ಹೊಸ ಕಾರ್ಯದರ್ಶಿ. ಬಲಿತ ನಾಚುಗಾರ್ತಿಯನ್ನು ಕರೆಸಿದ್ದ. ಲಕ್ಷಣವಾಗಿದ್ದ ಹಿಮ್ಮೇಳದವರು. ಆರಾಮವಾಗಿ ಕೂಡಬಹುದಾದ ಕುರ್ಚಿಗಳನ್ನು ಹಾಕಿದ್ದರೂ ನಾಚ್ ನಡೆಯುತ್ತಿದ್ದಾಗ, ಸೋಫಾ ಅಂಚಿನಲ್ಲೇ ನಿಮಿರಿ ಕೂತು ನೋಡುತ್ತಿದ್ದರು ವಯಸ್ಸಾದ ಧಡೂತಿ ಸದಸ್ಯರು ಕೂಡ. ನ ೀಗೆಯಾಡಿಸುತ್ತಲೇ ನಾಚ್ ನೋಡಿ ಬಯಕೆ ಬಂದವರಂತೆ ಸದಸ್ಯರು ಹಲವರು ಚಪ್ಪರಿಸಿದ್ದೂ ಆಯಿತು. ಹೊಸ ಕಾರ್ಯದರ್ಶಿ, ನಮ್ಮ ವಿನೋದಕ್ಕೆ ಅಂತ ನಮ್ಮ ಖರ್ಚಿನಲ್ಲಿ ನಾಚು ತೋರಿಸಿ, ಕಳಿಂಗ ತಾನೇ ತನ್ನ ಬಯಕೇನ ಆ ಮೇಲೆ ಸಾಧಿಸಿಕೊಳ್ಳುತಾನೇನೋ ಎಂದು ಕೆಲವರು ಕುಹಕವಾಡಿ ತಮ್ಮ ಹೊಟ್ಟೆಕಿಚ್ಚು ಪೂರೈಸಿಕೊಂಡಿದ್ದೂ ಉಂಟು.

ನಾಚು ಮುಗಿಯಿತು ರಾತ್ರಿ ಭೋಜನಕ್ಕೆ ಎಲ್ಲಾ ಸಿದ್ಧತೆಗಳನ್ನೂ ಹೊಸಾ ಕಾರ್ಯದರ್ಶಿ ಅಣಿಯಾಗಿ ಮಾಡಿಟ್ಟಿದ್ದ. ತಟ್ಟೆ ಲೋಟಾಗಳನ್ನೆಲ್ಲಾ ಒತ್ತಿ ಒತ್ತಿ ತೊಳೆಸಿ ಶುಭ್ರಮಾಡಿಸಿದ್ದ. ಕರವಸ್ತ್ರಗಳನ್ನೆಲ್ಲಾ, ಮೇಜಿನ ಮೇಲೆ ಹಾಸಿದ, ಒಟ್ಟೆಗಳನ್ನೆಲ್ಲಾ ಎತ್ತಿ ಎತ್ತಿ ಒಗೆಸಿ ಗರಿಮಾಡಿಸಿದ್ದ. ಮೇಜಿನ ಮೇಲೆ ಶೃಂಗಾರದ ಹೂ ಕುಂಡಗಳನ್ನು ಬೆಳಗಿಸಿ ಬೆಳ್ಳಿಗಿಸಿ ಇಟ್ಟಿದ್ದ. ಚಂಚ, ಚಾಕು, ಮುಳ್ಳು ಇತ್ಯಾದಿಗಳನ್ನು ಹೊಳಪು ಬರುವಂತೆ ಮಾಡಿಟ್ಟಿದ್ದ ಅಡಿಗೆಯ ಪದಾರ್ಥಗಳೂ ಅದೇ ರೀತಿ ಬಲು ರುಚಿಯಾಗಿಯೂ ನೋಡಲು ಬಾಯ್ನೀರು ತರುವಂತೆಯೂ ಇತ್ತು.

ಆದರೆ, ಹೊಸ ಕಾರ್ಯದರ್ಶಿಯ ಉನ್ನತ ಕಲಾಸಾಧನೆ ಬೇರೊಂದಿತ್ತು ಮೂರು ಮೂರು ಹಲ್ಲು ಬಿರುಕು ಚುಚ್ಚುವ ಕಡ್ಡಿಗಳನ್ನು ತೆಳುವಿನ Filigree ಕೆಲಸ ಮಾಡಿದ ಬೆಳ್ಳಿಯ Stand ನಲ್ಲಿ ಲಕ್ಷಣವಾಗಿ ಸಿಕ್ಕಿಸಿ ತಟ್ಟೆಯೊಂದರ

ಮುಂದೆಯೂ ಇಡಿಸಿದ್ದ. ಕ್ಲಬ್ಬಿನ ಸದಸ್ಯರಲ್ಲಿ ಸುಮಾರು ಜನ ಮಧ್ಯವಯಸ್ಸು ಮೀರಿದವರು ಊಟವಾದ ಮೇಲೆ ಉಂಡ ಊಟದ ಶತಾಂಶ ಎರಡಷ್ಟಾದರೂ, ಹಲ್ಲಿನ ಸಂದಿಗಳಲ್ಲೇ ಜಮಾವಣೆಯಾಗುತ್ತಿತ್ತು. ಅವರುಗಳ ನಾಲಿಗೆ ಮಾತ ನಾಡುವಾಗ ಎಷ್ಟೇ ಹರಿತವಾಗಿದ್ದರಲಿ, ಎಷ್ಟೇ ಚೂಪಾಗಿ ತೋರಲಿ, ಉಂಡ ಮೇಲೆ ಹಲ್ಲಿನ ಸಂದಿಯಲ್ಲಿದ್ದ ಆಹಾರದ ಅವಶೇಷಗಳನ್ನು ಎಷ್ಟೇ ಪ್ರಯತ್ನಪಟ್ಟು ದೂಡಲಿ, ನೂಕಲಿ, ಚುಚ್ಚಲಿ, ನಾಲಿಗೆ ತುದಿ ನೊಂದು ಶುದ್ಧ ನಿಷ್ಪ್ರಯೋಜಕ ಎಂದು ಕಂಡು ಬರುತ್ತಿತ್ತು. ಕಾರಣ ಬೆಂಕಿಕಡ್ಡಿಗಳು ಈ ತುದಿಯನ್ನು ಹಲ್ಲಿನಿಂದ ಚಪ್ಪಟೆಸಿ, ಹಲ್ಲಿನ ಸಂದಿಗಳಿಗೆ ತೂರಿಸಲು ಯತ್ನಿಸಿ, ಆ ಬೆಂಕಿಕಡ್ಡಿ ತುದಿ ಕೂಡ ಹಲ್ಲಿನ ಸಂದಿಗಳಲ್ಲಿ ಆಹಾರದ ಜತೆಗೆ ಜಡಿದಂತಾಗಿ ಮುರಿದುಕೊಂಡಾಗ ಬಾಯಿ ಬಾಯಿ ಬಿಡುತ್ತಿದ್ದರು ಕ್ಲಬ್ಬಿನ ಸುಮಾರು ಮಂದಿ ಸದಸ್ಯರು.

ಊಟಕ್ಕೆ ಕೂತಾಗ ಈ ಅಂದವಾದ ನಾಜೂಕಾದರೂ ಧೃಢವಾದ ತ್ರಿಮೂರ್ತಿ ಗಳಂತೆ ಮೂರು ಮೂರು ಕಡ್ಡಿಗಳು ತಟ್ಟೆಯ ಉತ್ತರಕ್ಕೆ ಛಾಸಿಂಗ ಕಟ್ಟಿದಂತೆ ತಮ್ಮ ಅಂದದ ಸ್ಟಾಂಡಿನಲ್ಲಿ ನಿಂತಿದುದನ್ನು ಕಂಡು, ಭೇಷ್! ಕಾರ್ಯದರ್ಶಿ ಎಂದು ಒಕ್ಕೊರಲಿನಿಂದ ಷಹಭಾಸ್ ಗೈದರು.

ಮುಖ್ಯ ಅತಿಥಿಗಳ ಮೇಜಿನಲ್ಲಿ ಕೊರವ, ಅರವಾಮುದ್ದು ಮತ್ತು ಸಾಮಿ ಕೂತಿದ್ದರು. ಸಾಮಿ ಅಧ್ಯಕ್ಷ. ಆ ಕಾರಣದಿಂದ ಆ ಸ್ಥಳ. ಅರವಾಮುದ್ದು ಉಪಾಧ್ಯಕ್ಷ, ಕೊರವ ಅಲ್ಲಿ ಕೂತಿದ್ದ, ಎಬ್ಬಿಸುಕ್ಕೆ ಯಾರಿಗೂ ಧೈರ್ಯವಿದ್ದಿಲ್ಲ ಆ ಕಾರಣದಿಂದ.

ಊಟ ಶುರುವಾಯ್ತು. ಅಲೆಯಲೆಯಾಗಿ ಸೇವಕರು ಬಂದರು, ಬಿಸಿ ತಿಂಡಿ ಗಳನ್ನು ತಂದರು, ಬೋಗುಣಿ ಸೌಟುಗಳಿಂದ ಒಡ್ಡಿದರು ಸದಸ್ಯರೆಲ್ಲಾ ತಂತಮಗೆ ಬೇಕಷ್ಟು ಬಡಿಸಿಕೊಂಡರು. ಸೊಗಸಾದ ಬಾಯಾರಿಕೆಯನ್ನು ಘನವಾಗಿ ತಣಿಸಿ ಕೊಂಡಿದ್ದ ಸದಸ್ಯರೆಲ್ಲ, ಊಟದ ರುಚಿಯನ್ನೂ ಅರಿಯದೆ ಸೊಪ್ಪು ಮೇಯೋ ಮೇಕೆಗಳಂತೆ ಗಡದ್ದಾಗಿ ತಿಂದು ತೇಗಿದರು.

ಅನಂತರವೇ ಪ್ರಾಯಶ್ಚಿತ್ತ. ಮುಖ್ಯ ಅತಿಥಿಗಳ ಭಾಷಣ ಮುಖ್ಯ ಅತಿಥಿ ಗಳು ಹೆಸರಾಂತ ಸ್ವಯಂಸೇವಕರು ರಾಷ್ಟ್ರಾಭಿಮಾನಿಗಳು ದೇಶದ ಸ್ವಾತಂತ್ರ್ಯಕ್ಕೆ ಇಂಗ್ಲೆಂಡಿಗೇ ಹೋಗಿ ಸಮರ ನಡೆಸಿದವರು. ಜೈಲುವಾಸ ಕೂಡ ಮಾಡಿದ ಮಹನೀಯರು. ಶರಾವತಿಯ ಜಲಪಾತದಂತೆ ಅರ್ಧಗಂಟೆ ಭೋರ್ಗರೆದರು. ಎದುರಿಗಿದ್ದ ವೈಕ್ಸ್‌ನ ಮುಖ ಮೂತಿಯೆಲ್ಲಾ ಒದ್ದೆಯಾಗಿ ನೀರು ತೊಟ್ಟಿಕ್ಕಿತು. ಇಂತಹ ಗಂಭೀರವಾದ ಭಾಷಣ, ಉತ್ಸಾಹ ಪೂರ್ಣ ಸ್ವಾರ್ಥತ್ಯಾಗಕ್ಕೆ ಕರೆ ಇತ್ತ ಅರ್ಥವಾಗದ ಭಾಷಣ, ಕಂಡು ಉಂಡು ತಿಂದು ತೇಗಿದ ಸದಸ್ಯರಿಗೆ ಅಷ್ಟಾಗಿ

ಮನದಟ್ಟುವದಂತಿರಲಿ, ತನುವಿನ ಹತ್ತಿರ ಕೂಡ ಹೋಗಲಿಲ್ಲ ಅನ್ನಬಹುದು. ಕೆಲವರಿಗೆ ಸ್ವಲ್ಪ ಬೇಜಾರು. ಇನ್ನು ಕೆಲವರಿಗೆ, ಭೀಭತ್ಸ, ಮತ್ತೆ ಹಲವು ಅರಳುಮರುಳಿನವರಿಗೆ ಸ್ವಲ್ಪ ಕೋಪ; ಈ ಹೊತ್ತಿನಲ್ಲಿ, ಈ ಸಮಾವೇಶದಲ್ಲಿ ಸ್ವಲ್ಪ ಹಗೂರಾದ ಭಾಷಣವಾಗಬಾರದಿತ್ತೇ ಎಂದು ಒಬ್ಬ ಆಕಳಿಸಿದ, ಸದ್ದಿಲ್ಲದೆ. ಇಬ್ಬರು ಆಕಳಿಸಿದರು ಪಕ್ಕದವರಿಗೆ ಕೇಳಿಸದಂತೆ. ಸಾಂಕ್ರಾಮಿಕ ಜಾಡ್ಯ ಹರಡಿದಂತೆ, ಸಂತೇಲಿ ಸೀರೇನ ಕೊಳ್ಳುವವರಂತೆ, ಆಕಳಿಕೆ ಭೋಜನ ಕೂಟದಲ್ಲೆಲ್ಲಾ ಹರಡಿತು.

ಈ ಪ್ರಾಯಶ್ಚಿತ್ತದ ಭಾಷಣ ಸಾಗುತ್ತಿದ್ದಾಗ ಅರವಾಮುದ್ದು ಎದುರಿನಲ್ಲಿದ್ದ ಹಲ್ಲುಕಡ್ಡಿ ಸ್ಟ್ಯಾಂಡನ್ನು ಹಿಡಿದುಕೊಂಡು ಕೈಬೆರಳುಗಳಲ್ಲಿ ಆಡುತ್ತಾ ಇದ್ದ. ಅದನ್ನು ಮೆಲ್ಲಗೆ ತಡವರಿಸಿದ. Filigree ರೇಖೆ ರೇಖೆಯನ್ನೂ ಸ್ಪರ್ಶಿಸಿದ. ಅದನ್ನು ಮೋಹಿಸಿದ. ಯಾರೂ ನೋಡುತ್ತಿಲ್ಲ ಎಂದು ಧೈರ್ಯವಾದಾಗ ಮೆಲ್ಲಗೆ ಬಲಗೈ ಜೇಬಿಗೆ ಅದನ್ನು ಇಳೀಬಿಟ್ಟ. ಹಾಲು ಕುಡಿದ ಬೆಕ್ಕಿನಂತೆ. ಪರ್ಮಿಟ್ ಗಿಟ್ಟಿಸಿ ಮಾರಿಕೊಂಡ, ಪುಡಾರಿಯಂತೆ. ಸತ್ಯ ಶಾಂತಿಯನ್ನೆಲ್ಲಾ ಮುಖದ ಮೇಲೆ ಬಿಂಬಿಸಿದ. ಮುಖ್ಯ ಮೊದ್ದನಂತೇ ಕೂತ.

ಅವನ ಬಲಪಕ್ಕದಲ್ಲೇ ಕೊರವ ಕುಳಿತಿದ್ದ. ಅವನೂ ಆಕಳಿಸುತ್ತಲೇ ಇದ್ದ. ಕಣ್ಣುರೆಪ್ಪೆ ಮುಕ್ಕಾಲು ಮುಚ್ಚಿ ಝೋಂಪು ಬಂದವನಂತಿದ್ದ. ಬೇಜಾರು ಬೇರೆ ಅಸಾಧ್ಯವಾದ್ದರಿಂದ ನಿದ್ದೆಯೂ ಹತ್ತಿರಲಿಲ್ಲ. ಕೆಳಗಣ್ಣಿನಲ್ಲಿ ಎಲ್ಲರ ಕಡೆಗೂ ದೃಷ್ಟಿ ಹಾಯಿಸಿದ್ದ. ಅರವಾಮೊದ್ದುವಿನ ಕಡೆ ದೃಷ್ಟಿ ಬಿದ್ದಾಗ, ರಸನಿಮಿಷ ನೋಡಿ, ಅರವಾಮೊದ್ದು ಹಲ್ಲುಕಡ್ಡಿ ಸ್ಟ್ಯಾಂಡನ್ನು ಬಲಜೇಬಿಗೆ ಇಳಿಬಿಡುತ್ತಿದ್ದ.

"ಎಲ ಎಲಾ ಅರವಾಮುದ್ದು, ಬರೀ ಮೊದ್ದು ನೀನು ಅಂತಂದುಕೊಂಡಿದ್ದೆ ನಾನು. ಲಪಟಾಯಿಸಬೇಕು ಅಂತಿದ್ದ ಸ್ಟ್ಯಾಂಡನ್ನು, ನನಗೆ ಮೊದಲೇ ಧೈರ್ಯವಾಗಿ ಹಾರಿಸಿದೆಯಲ್ಲಾ! ಭೇಷ್, ನನ್ರಾಜ; ಧನ್ಯ ನಿನ್ನಪ್ಪ" ಎಂದು ಮನಸ್ಸಿನಲ್ಲೇ ಕೊರವ ಅರವಾಮೊದ್ದುವನ್ನು ಸ್ವಲ್ಪ ಹೊಟ್ಟೆಕಿಚ್ಚಿದ್ದರೂ ಅಭಿನಂದಿಸಿದ. ಗುಣಕ್ಕೆ ಮಾತ್ಸರ್ಯವು ಇರಬಾರದು ಅಲ್ಲವೇ?

ಅಧ್ಯಕ್ಷ ಸಾಮಿ ಎದ್ದು ಮುಖ್ಯ ಅತಿಥಿಗಳಿಗೆ ವಂದನಾರ್ಪಣೆ ಒಪ್ಪಿಸಬೇಕು. ಆಗ ಭೋಜನ ಕೂಟದ ಕಡೆಕುರ್ಚಿಗಳ ಕಡೆಯಿಂದ "ಕೊರವ ಬೇಕು! ಕೊರವ ಮಾತಾಡಲಿ, ಕೊರವ ನಗಿಸಲಿ" ಎಂದು ಒಂದು ಕೂಗೆದ್ದಿತು. ಕೆಲವೇ ಕ್ಷಣಗಳಲ್ಲಿ ಕೂಗು ಬಲಿತು, ಬೊಬ್ಬೆಯಾಯಿತು.

ಬೇರೆ ಮಾರ್ಗವಿಲ್ಲದೆ ಸಾಮಿ "ಮಹಾಜನರ ಅಭಿಲಾಷೆಯಂತೆ ಈಗ ಶ್ರೀ ಕೊರವ ಅವರನ್ನು ಭಾಷಣ ಮಾಡಲೆಂದು ಸವಿನಯವಾಗಿ ಬೇಡಿಕೊಳ್ಳುತ್ತೇನೆ" ಎಂದು ಹೇಳಿ ಕೂತುಕೊಂಡ.

ಕೊರವ ಎಚ್ಚೆತ್ತವನಂತೆ ಕಣ್ಣೊರೆಸಿಕೊಂಡು ಎದ್ದ, ನಿಂತ ಸ್ವಲ್ಪ ಕೆಮ್ಮಿದ. ಎದುರಿಗೆ ಕುಳಿತಿದ್ದ ಕುಮಾರಿಯು ಕೇಶ ರಚನೆಯನ್ನು ಕಂಡೋ ಏನೋ ಸ್ವಲ್ಪ ಕೆನೆದ. ನಂತರ ಹೇಳಿದ.

"ನಾನು ಭಾಷಣ ಗೀಷಣ ಮಾಡುವುದನ್ನೆಲ್ಲ ತ್ಯಜಿಸಿ, ಕೆಲಸ ಮಾತ್ರ ಮಾಡೋದನ್ನು ಅಭ್ಯಾಸಮಾಡ್ತಾ ಇದ್ದೇನೆ. ನಮಗೆ ರಾಜಕೀಯ ಸ್ವಾತಂತ್ರ್ಯ ಬಂದ ಮೇಲೆ ಆರ್ಥಿಕ ಸ್ವಾತಂತ್ರ್ಯ ಬರಬೇಕಾದರೆ ತುಂಬಾ ಹಣಬೇಕು ನಮ್ಮ ಭಾರತದಲ್ಲಿ ಲಾಗಾಯ್ತಿನಿಂದಲೂ ಮಂತ್ರ ಮಾಟ ಮಾಯ ಮಾಡಿದರೆ ಹೇರಳ ಹಣ ತಯಾರಿಸಬಹುದು, ಚಿನ್ನಮಾಡಬಹುದು. ರೂಪಾಯಿಗೆ ಕಾಯಕಲ್ಪ ಮಾಡ ಬಹುದು, ಎಂದೆಲ್ಲಾ ನಂಬಿಕೆ ಇದ್ದೇ ಇದೆ. ಆದಕಾರಣ ನಾನೀಗ ದೇಶೋದ್ಧಾರ ಮಾಡಬೇಕು ಎನ್ನುವ ಹಂಬಲದಿಂದ, ಸಾಮಾನ್ಯ ಮನುಷ್ಯನ ಏಳಿಗೆಗೆ ಪೀಠ ಹಾಕಬೇಕು ಎನ್ನುವ ಉತ್ಸಾಹದಿಂದ, ಮಾಯಮಾಡೋದನ್ನು ಆಚಾರ್ಯ ಆಗಮಿಾಕರಿಂದ ಕಲೀತಿದ್ದೇನೆ. ಈಗ ನಿಮ್ಮೆದುರಿಗೆ ಪ್ರದರ್ಶನಮಾಡಿ ತೋರಿಸ್ತೇನೆ" ಎಂದು ಹೇಳಿದಾಗ,

ಹಿಂದಿನ ಕುರ್ಚಿಗಳಿಂದ "ಇಲ್ಲಿ ಈಗ ನಿನ್ನ ಪ್ರದರ್ಶನ ಬೇಡವೋ" ಎಂಬ ಕೂಗು ಕೇಳಿಸಿತು.

"ನನ್ನ ಪ್ರದರ್ಶನವಲ್ಲ. ನನ್ನ ಜಾದೂ ಪ್ರದರ್ಶನ ಮಾತ್ರ" ಎಂದು ಕೊರವ ಹೇಳಿ ಮುಂದುವರೆದ.

"ಈಗ ನೋಡಿ ನನ್ನೆದುರಿಗೆ ಹಲ್ಲುಕಡ್ಡಿ ಸ್ಟಾಂಡಿದೆ. ಎಷ್ಟು ಸೊಗಸಾಗಿದೆ. ಇದನ್ನು ನನ್ನ ಜೇಬಿಗೆ ಹಾಕುತ್ತೇನೆ. ನಂತರ ಮೋಹಿಸೀ ಕಾಪಾಲಿಕರ ಮಂತ್ರ ಹಾಕಿ, ಅದು ಇನ್ನೊಬ್ಬರ ಜೇಬಿಗೆ ನೀವು ಕಣ್ಣುಬಿಟ್ಟುಕೊಂಡಿದ್ದರೂ ಕಾಣದಹಾಗೆ ಸಾಗುತ್ತದೆ. ದಿಗ್ಬಂಧನೆ ಮಾಡಿ ಅದನ್ನು ಅವರ ಜೇಬಿನಲ್ಲಿ ಪ್ರತ್ಯಕ್ಷಮಾಡಿಸಿ ತೆಗೆದು ನಿಮಗೆ ತೋರಿಸುತ್ತೇನೆ" ಎಂದೆಂದು,

ತನ್ನ ಜೇಬಿಗೆ ಆ ಹಲ್ಲುಕಡ್ಡಿ ಸ್ಟಾಂಡನ್ನು ಸಾಗಿಸಿದ ಮಂತ್ರ ಹಾಕಿದ. ಅರವಾಮೊದ್ದು ಬಲ ಜೇಬಿಗೆ ಕೈಹಾಕಿ ಹಲ್ಲುಕಡ್ಡಿ ಸ್ಟಾಂಡನ್ನು ಹೊರಕ್ಕೆ ತೆಗೆದು ತೋರಿಸಿ ಮೇಜಿನ ಮೇಲಿಟ್ಟ.

ಅರವಾಮೊದ್ದು ಪಕಪಕ ಅಂತ ನೋಡುತ್ತಿದ್ದಾಗಲೇ ಕೊರವ ಹೊರಹೊರಟ. ವಂದನಾರ್ಪಣೆ ಮರೆತೇಹೋಯಿತು. ಕೂಟ ಮುಕ್ತಾಯವಾಯ್ತು.

—ಕುಮಾರ್.

ಕೊರವೇಶ್ವರ ವಚನಗಳು

(ಪ್ಯಾಸ್ಟರ್‌ನಾಕ್ ಕುರಿತು)

ರಾಷ್ಟ್ರ ರಾಷ್ಟ್ರಗಳ ರಾಜಕೀಯದಲಿ ಅಡಗಿ ಕುಳಿತು ಕಾಡುತಿದೆ ಕೋಲ್ಡ್ ವಾರು! ದಾನದಲಿ ಕೋಲ್ಡ್ ವಾರು, ಧರ್ಮದಲಿ ಕೋಲ್ಡ್ ವಾರು, ನೋಬೆಲ್ ಬಹುಮಾನದಲಿ ಕೋಲ್ಡ್ ವಾರು, ಅದನು ಸ್ವೀಕರಿಸುವುದರಲಿ ಕೋಲ್ಡ್ ವಾರು! ಜಗದ ಪ್ರತಿಯೊಂದರಲು ಕೋಲ್ಡ್ ವಾರೆ ತಲೆಯೆತ್ತುತಿರುವಾಗ ಪ್ಯಾಸ್ಟರ್ ನಾಕನೆಂತ ಅದರ ನೆಳಲಿಂದ ತಪ್ಪಿಸಿಕೊಂಬನಯ್ಯ—ಎಂದು ಗಲ್ಲಕ್ಕೆ ಬೆರಳಿಡುವ ನಮ್ಮ ಕೊರವೇಶ್ವರ.

ಕಪ್ಪೆ ಸರ್ಪನ ನೆಳಲಲ್ಲಿ ಇಪ್ಪಂತೆ ನಿನಗಾಯಿತಯ್ಯ! ಸ್ವತಂತ್ರ ಯೋಚನೆಯ ದ್ವೇಷಿಸುವ ಮಂದಿಯ ನಡುವೆ ನಿಂತು ನಿನ್ನಮರ—ಭಾವಗಳ ಅಕ್ಷರದಿ ಮೂಡಿಸಲೆತ್ನಿಸಿ ಆಳ್ವವರ ಅಪಕೃಪೆಗೊಳಗಾದೆಯಯ್ಯ. ನಿನ್ನ ಎತ್ತ ಏಸುಗಳ ಕುರಿತು ಜಗ ಕಾತರಗೊಂಡಿಹುದಯ್ಯ ಎಂದು ನಿಟ್ಟುಸಿರು ಬಿಡುವ ನಮ್ಮ ಕೊರವೇಶ್ವರ.

ಚಂದನವ ಕಡಿದು ತೇದೊಡೆ ನೊಂದೆನೆಂದು ಅದು ಕಂಪ ಬಿಟ್ಟಿತ್ತೆ? ನಿನ್ನ ಮಹಾಕೃತಿ ಪ್ರಕಟವಾಗದಂತೆ ತಡೆದರಯ್ಯ; ನೋಬೆಲ್ ಬಹುಮಾನವನು ನಿರಾಕರಿಸುವಂತೆ ಮಾಡಿದರಯ್ಯ; ನೀ ಕವಿಯಲ್ಲ, ಸಾಹಿತಿಯಲ್ಲ ಎಂದು ಹೀಗಳೆದರಯ್ಯ ಆದರೇನು ಹುಟ್ಟು ನೆಲವ ಬಿಟ್ಟು ಹೊರಡಲಾರೆನೆಂಬ ಅಭಿಮಾನಿ ರಶ್ಯನನ ಕೊಂಡಾಡುವನು ನಮ್ಮ ಕೊರವೇಶ್ವರ.

ಶೂಲದ ಮೇಲಣ ಭೋಗವೇನಾದರೇನೋ? ಮಿಲಿಯಾಂತರ ಹೊತ್ತಗೆಗಳ ಹೊರೆ ಹೊರೆಯಾಗಿ ಅಚ್ಚು ಹೊಡೆಸಿ ಕಾಸು ಮೂರು ಕಾಸಿಗೆ ಹಂಚಿದೊಡೇನಯ್ಯ? ಜಗದೊಳೆಲ್ಲ ಚೆಲ್ಲಿದರೇನಯ್ಯ? ನಿಮ್ಮ ನೆಲದಲಿ ಹುಟ್ಟಿ ಬೆಳೆದೊಂದು ಜೀವ ಭಾವ ತುಂಬಿ ಬರೆದೊಂದು ಕೃತಿಯ ಅಚ್ಚು ಮಾಡಿಸಿ ಓದುವ ಧೈರ್ಯ, ಪುಣ್ಯ ನಿಮಗಿಲ್ಲವಾಯಿತಯ್ಯ—ಎಂದು ರಶ್ಯನರ ಕಂಡು ಕನಿಕರಿಸುತಿಹ ನಮ್ಮ ಕೊರವೇಶ್ವರ.

ಹುತ್ತವ ಬಡಿದಡೆ ಹಾವು ಸಾಯುವುದೇನಯ್ಯ? ಪ್ಯಾಸ್ಟರ್‌ನಾಕನ ತೆಗಳಿದ ಮಾತ್ರಕ್ಕೆ ಜನರೆದೆಯೊಳು ಸುಪ್ತವಿಹ ಸ್ವಾತಂತ್ರ್ಯ ತೃಷೆಯು ಅಡಗುವುದೇನಯ್ಯ?

ನಿಮಗೊಗ್ಗದ ಕೃತಿಯೊಂದಕೆ ಮುಟ್ಟುಗೋಲೆಳೆದು ಬರೆದಾತನ ಬುದ್ಧಿ ಪೊಳ್ಳೆಂಬ ನಿಮ್ಮ ಪಾಡು ಮರಳೊಳಗೆ ತಲೆ ಹುದುಗಿಸುವ ಮರುಭೂಮಿಯ ಆ ಹಕ್ಕಿಯದಾಯಿತಯ್ಯ ಎಂದು ತಿವಿಯುವನು ನಮ್ಮ ಕೊರವೇಶ್ವರ.

ಎನಿಸು ಕಾಲ ಕಲ್ಲು ನೀರೊಳಗಿದ್ದರೇನು, ನೆನೆದು ಮೃದುವಾಗಬಲ್ಲದೆ? ಎನಿಸು ಕಾಲ co-existence ಮಂತ್ರ ಪಠಿಸಿದರೇನು ಹೃದಯದೊಳಡಗಿರುವ ಕಿಲುಬು, ಕೀಳ್ತನ, ಕ್ರೌರ್ಯ, ಕಾಠಿಣ್ಯಗಳು ಕರಗಬಲ್ಲವೆ? "ನೂರು ಹೂವುಗಳರಳಿ ಶೋಭಿಸುವ" ಮಾತಿರಲಿ, ಹೂ ಒಂದುನೊಳಿದು ಎರಡನೆಯದು ಮೊಗ್ಗಿಟ್ಟಿತೆಂದರೆ ಕಿತ್ತು ಕಿವಿಚಿಬಿಡುವ ಖೋಡಿಗಳ ಕಂಡು ಕಿಡಿಕಿಡಿಯಾದ ನಮ್ಮ ಕೊರವೇಶ್ವರ.

ಆತ್ಮ ಸಾಕ್ಷಿಯೊಳಪಾರ ಶ್ರದ್ಧೆಯಿರಿಸಿದ ಜೀವ ಜಗದ ಭಂಡರೀವ ಮಂಡನೆ ಖಂಡನೆಗಳನೆಲ್ಲ ಮೀರಿರುವುದಯ್ಯ! ಬಾಳು ಬಾಳಯ್ಯ ಪ್ಯಾಸ್ಟರ್‌ನಾಕ್, ಬಹು ಕಾಲ ಬಾಳೆಂದು ನಭ ಕೊಗೆವ ಕೈಗಳನು ನಮ್ಮ ಕೊರವೇಶ್ವರ.

—ರಾಮಿ



—"ವರುಷಕ್ಕೊಂದು ದೀಪಾವಳಿ ತಾನೆ! ಅದಕ್ಕೇ, ಮನೇಲಿದ್ದ ನಿಮ್ಮ ಹಳೇಕಾಗದಗಳನ್ನಾ ಕೊಟ್ಟು ಹೋಗೋಣಾಂತ ಬಂದೆ."

ಕರಡಿಯ ಕತೆ

ಹಿಂದಾನೊಂದು ಕಾಲದಲ್ಲಿ ಹಲಸಿನ ಮರದ ಕಾಡಿನಲ್ಲಿ ಒಂದು ಕರಡಿ ಅಣಿಯಾಗಿ ಸುಖವಾಗಿ ಸಂಸಾರ ಮಾಡಿಕೊಂಡಿತ್ತಂತೆ. ಜತೆ ಕರಡಿಗಳನ್ನು ಕೂಡಿ ಸಾಯಂಕಾಲ ವಿಹಾರಕ್ಕೆ ಅಂತ ಹೊರಟು ಹಲಸಿನ ತೊಳೆ ಜೇನುತುಪ್ಪ ಗಡದ್ದಾಗಿ ತಿಂದು, ಇಸ್ಪೀಟ್ ಆಟಕ್ಕೆ ಅಂತ ಕೂತುಕೊಳ್ಳೋದಂತೆ. ರಾತ್ರಿ ೧ ಗಂಟೆಗೊ ಎರಡು ತಾಸಿಗೋ ಇದ್ದ ಹಣವನ್ನೆಲ್ಲಾ ಕಳೆದುಕೊಂಡು ಸಾಲಮಾಡಿ, ತಲೆ ತಿರುಗಿದೋರ ಹಾಗೆ ಊಗಾಡುತ್ತ ಮನೆಗೆ ಹಿಂತಿರುಗಿ ಒರುತ್ತಿತ್ತಂತೆ ಮನೆಯಾಕೆ ಊಟಕ್ಕೆ ಆ ಸಿಶಿ ರಾತ್ರೀಲೂ ಸಿದ್ಧಮಾಡಿದರೆ, ಅವಳ ಮೇಲೆ ರೇಗಿ, ಅನ್ನ ಎಸೆದು, ಸಾರು ಚೆಲ್ಲಿ ಮಕ್ಕಳ ಮೇಲೆ ರೇಗಿ ಹಾಸಿಗೆ ಮೇಲೆ ಅಮಲಿನಲ್ಲಿ ಬಿದ್ದು ಗೊರಕೆ ಹುಯ್ಯುತ್ತಾ ಬೆಳಗ್ಗೆ ೮-೯ ರ ತನಕ ಮಲಗಿರುತ್ತಿತ್ತಂತೆ. ಬೆಳಗ್ಗೆ ಎದ್ದು ಹೆಂಡತೀನ ಬಯ್ದು ನೀನೂ ಮೇಡಂ ಕೆಲಸಕ್ಕೆ ಸೇರಿಕೊಂಡು ಸಂಸಾರ ನಿಭಾಯಿಸಬಾರದೇ ? ಮಕ್ಕಳನ್ನು ಕಾಪಾಡಬಾರದೇ ನಾನೊಬ್ಬನೇ ದುಡೀಬೇಕೇ ಎಂದೆಲ್ಲಾ ಗಲಾಟೆ ಮಾಡುತ್ತಿತ್ತಂತೆ.

ಒಂದು ಸಂಜೆ ಇಸ್ಪೀಟಿಗೆ ಹೋಗಬೇಕು ಎಂದು ಮಾರ್ವಾಡಿ ಹತ್ತಿರ ಹೋಗಿ ವಾಚೇನ ಅಡವಿಟ್ಟು ಹಣ ತೆಗೆದುಕೊಂಡು ಹೋಗುತ್ತಿದ್ದಾಗ ಅದರ ತಂದೆಯ ಸ್ನೇಹಿತರೊಬ್ಬರು ಸಿಕ್ಕಿದರಂತೆ. ಅಭ್ಯಾಸ ಬಲದಿಂದ ಅವರಿಗೆ ನಮಸ್ಕಾರ ಮಾಡಲು ಆ ವೃದ್ಧ ಕರಡಿ ಹರಸಿ ಹೇಳಿತಂತೆ "ಮಗು, ನಿನ್ನ ತಂದೆ ಅಂತಹ ದೊಡ್ಡ ಜಾತಿ ಕರಡಿ. ಜಾಂಬವಂತನ ಗೋತ್ರದವರು. ನಮ್ಮ ದೇಶದಲ್ಲೇ ನಿಮ್ಮಂತಹ ದೊಡ್ಡ ಮನೆತನದವರಿಲ್ಲ. ಅಂತಹ ಹಿರಿಯರ ಹೊಟ್ಟೇಲಿ ಹುಟ್ಟಿ, ಈಗ ಬೀದಿ ಜನದ ಬಾಯಿಗೆ ಬಿದ್ದಿದ್ದೀ ನೀನು. ಸಂಜೆ ಮಧುಪರ್ಕ ಸೇವಿಸಿ ಬೆಳಗಿನ ಝಾಮದ ತನಕ ಇಸ್ಪೀಟ್ ಆಡಿ ಅಮಲಿನಲ್ಲಿ ಮನೆಗೆ ಹೋಗಿ ರಾದ್ಧಾಂತ ಮಾಡಿ ನೆರೆ ಹೊರೆಯವರ ನಿದ್ರೆಯನ್ನೆಲ್ಲಾ ಕೆಡಿಸುತ್ತೀಯಂತೆ. ಶುದ್ಧ ಅಪಾಪೋಲಿ ಇವ, ಮನುಷ್ಯರ ಹಾಗೆ ಕೆಟ್ಟುಹೋಗಿದ್ದಾನೆ ಎಂದೆಲ್ಲಾ ಜನ ಹೀಯಾಳಿಸುವುದನ್ನು ಈ ಪಾಪಿ ಕಿವಿಗಳಲ್ಲಿ ಕೇಳಿದ್ದೇನೆ. ಇನ್ನೂ ಮೇಲಾದರೂ ದೇವರು ದಿಂಡರು ಅಂತ ಸನ್ಮಾರ್ಗ ಪ್ರವರ್ತಕನಾಗಿ ಕರಡಿ ಜಾತಿಗೆ ಕಲಶಪ್ರಾಯನಾಗಿ ಬಾಳೋ ಬುದ್ಧಿ ನಿನಗೆ ಬರಲಿ"

ಎಂದೆಲ್ಲಾ ಉಪದೇಶ ಮಾಡುತ್ತಾ ಕಡೆಗೆ ಹೇಳಿತಂತೆ:—ನಿನಗೂ ಈಗ ಬೆಳೆದ ಮಗಳು ಜಾಂಬವತಿ ಇದ್ದಾಳೆ. ಅವಳಿಗೆ ಒಳ್ಳೆ ವರವನ್ನು ನೋಡಿ ಮದುವೆ ಬೇರೆ ಮಾಡಬೇಕು. ನಿನ್ನ ಕೀರ್ತಿ ಕೇಳಿದ ಯಾವ ಸತ್ಕರಡಿ ನಿಮ್ಮನೆ ಹೆಣ್ಣನ್ನು ತಂದುಕೊಳ್ಳುತ್ತೆ ಎಂದು ಕೊನೆಗೆ ಮರ್ಮಘಾತುಕವಾಗಿ ಹೇಳಿತಂತೆ.

ಆಗ ಸಾಷ್ಟಾಂಗವೆರಗಿ, ಇಸ್ಪೀಟಿಗೆ ಹೋಗದೆ ಕರಡಿ ಸಂಜೆಗೇ ಮನೆಗೆ ಬಂದು, ಸ್ನಾನಕ್ಕೆ ನೀರು ಕಾಯಿಸು ಎಂದು ಹೆಂಡತೀನ ದಬಾಯಿಸ್ತಂತೆ. ನೀರು ಕಾದಮೇಲೆ ಎಣ್ಣೆ ಸ್ನಾನ ಮಾಡಿತಂತೆ. ಮನೆಯವರೆಲ್ಲಾ ಎಷ್ಟೊಷ್ಟೊ ಸೀಗೆಕಾಯಿ ಹಾಕಿ ಉಜ್ಜಿದರೂ ಎಣ್ಣೆ ಇನ್ನೂ ಉಳಿದೇ ಇತ್ತಂತೆ. ಮನೆಯವರೆಲ್ಲಾ ಸುಸ್ತಾದರಂತೆ. ಆ ಮೇಲೆ ಕರಡಿ ಮಡಿ ಬಟ್ಟೆ ಹಾಕಿಕೊಂಡು ದ್ವಾದಶನಾಮ ಶಂಖ ಚಕ್ರ ಮುದ್ರೆಗಳನ್ನು ಒತ್ತಿಕೊಂಡು ದೇವಸ್ಥಾನಕ್ಕೆ ಹೋಯಿತಂತೆ, ಸಂಜೆ ಪೂಜೆಗೆ ಎಂದು. ದೇವಸ್ಥಾನದ ಬಾಗಿಲನ್ನು ಪೂಜಾರಿ ತೆರೆದೇ ಇತ್ತಿಲ್ಲವಂತೆ. ಅವನನ್ನು ಮಡಿ ಕೋಲಿನಿಂದ ಹೆದರಿಸಿ, ದೇವಸ್ಥಾನದ ಬಾಗಿಲು ತೆಗೆಸಿ, ದೇವರ ಪೂಜೆ ಮಾಡಿಸಿ, ಭಜನೆ ಮಾಡಿ, ಹಿಂತಿರುಗುವ ವೇಳೆಗೆ ಬೆಳಗಿನ ಝಾಮ ೧-೨ ಗಂಟೆಯಾಗಿತ್ತಂತೆ. ಮುಟ್ಟಬೇಡ ಮಡಿ! ಅಯ್ಯೋ! ಮೈಲಿಗೆ ಆಗಿ ಹೋಯ್ತು, ಈಗ ಊಟ ಮಾಡುಲ್ಲ, ಎಂದೆಲ್ಲಾ ಹೆಂಡತೀನ ಗೋಳು ಹುಯ್ಯುಕೊಂಡು, ಮಕ್ಕಳನ್ನೆಲ್ಲಾ ಎಬ್ಬಿಸಿ ಸಂಧ್ಯಾವಂದನೆ ಮಾಡಿದಿರಾ ಮಕ್ಕಳಾ ಎಂದೆಲ್ಲಾ ತಪ್ಪು ಕಂಡು ಹಿಡಿದು ಬೈದು ಗೋಳಾಡಿಸಿ, ಕಡೆಗೆ ಉಪವಾಸ ಮಲಗಿತಂತೆ ಬೆಳಗಿನ ಝಾಮ ೨ ಗಂಟೆ ಹೊತ್ತಿಗೆ ಬೆಳಗ್ಗೆ ಎದ್ದಾಗ ಯಥಾಪ್ರಕಾರ ೮ ಗಂಟೆ ಆಗಿತ್ತಂತೆ.

ನೀತಿ:—ಹೇಗಾದರೂ ಮಾಡಿ ಪ್ಲಾನು ಸಾಧಿಸ್ತೀವಿ ಅಂತ ಹೊರಟರೆ, ಎಡದಡವಾದರೇನು ಬಲದಡವಾದರೇನು ಸಾಲದಲ್ಲಿ ಮುಳುಗಿ ನೀರು ಕುಡಿಯೋದು ತಪ್ಪಿದ್ದಲ್ಲ.

—ಪ್ರಸಾದ್

ಸ್ವಾಮಿಜಿ ಬಂದು ಹೋದ ಮೇಲೆ

ಒಳ್ಳೆಯ ವಿದ್ವಾಂಸರಾದ ಸ್ವಾಮೀಜೀಗಳೊಬ್ಬರು ಮೂರು ವಾರಗಳ ಕಾಲ ನಮ್ಮೂರಿನಲ್ಲಿ ಬೆಳಗ್ಗೆ ಸಂಜೆ ಉಪನ್ಯಾಸಕೊಟ್ಟು ವೇದಾಂತ ವಿಷಯಗಳನ್ನು ಬಹಳ ಚೆನ್ನಾಗಿ ವಿವರಿಸಿದರು. ದಿನದಿನವೂ ಸಾವಿರಾರು ಮಂದಿ ನಾಗರಿಕರು ಉಪನ್ಯಾಸ ಕೇಳಿ ಪುನೀತರಾದರು. ಒಂದೇ ತಿಂಗಳಲ್ಲಿ ನಮ್ಮೂರಿಗೆ ಊರೇ ಪರಿವರ್ತನೆ ಹೊಂದುವ ಭಯ ಕಾಣಿಸಿಕೊಂಡಿತು, ಜನರ ಶ್ರದ್ಧಾ ಭಕ್ತಿಗಳ ಪರಿ ನೋಡಿ. ಪರಿಸ್ಥಿತಿಯ ಸಿಂಹಾವಲೋಕನ ಮಾಡುವ ಚಪಲದಿಂದ ತಿಂಗಳಾದ ಮೇಲೆ ಸುತ್ತ ಮುತ್ತಲೂ ನೋಡಿದರೆ ಪರಿವರ್ತನೆಯಾಗಿದ್ದು ಬಹುಮಟ್ಟಿಗೆ ನಿಜವೆನ್ನಿಸಿತು. ಪರಿವರ್ತನೆಯ ವಿವರ ಹೀಗಿದೆ :—

1. ಪಕ್ಕದ ಮನೆ ವೆಂಕಟಪ್ಪನಿಗೆ ಮೊದಲು ಬೆಳಗ್ಗೆ ಎಂಟುಗಂಟೆಗೆ ಹೊಟ್ಟೆಗೆ ನಾಷ್ಟ ಬಿದ್ದಿದ್ದರೆ ಸಾಲುತ್ತಿತ್ತು. ಆತ ಸ್ವಾಮಿಜಿಯವರ ಪ್ರಾತಃಕಾಲದ ಉಪನ್ಯಾಸ ಕೇಳುವುದಕ್ಕೆಂದು ಏಳು ಗಂಟೆಯ ಮೊದಲೇ ಟಿಫನ್ ಮುಗಿಸಿ ಹೊರಡ ತೊಡಗಿದ. ಮೂರು ವಾರ ಹೀಗೆ ನಡೆಯಿತು. ಆದರೆ ಅದು ಅಭ್ಯಾಸವಾಗಿ ನಿಂತುಬಿಟ್ಟು, ಅವನ ಹೆಂಡತಿಗೆ ಈಗ ಬೆಳಗ್ಗೆದ್ದು ಅಷ್ಟು ಬೇಗನೆ ತಿಂಡಿ ತಯಾರಿಸಲು ಸಾಕುಸಾಕಾಗುತ್ತದೆ, ಮಾತ್ರವಲ್ಲದೆ ಉಪನ್ಯಾಸ ಕೇಳಿದ್ದರಿಂದ ಉಂಟಾದ ಜ್ಞಾನದಾಹವನ್ನು ಅಡಗಿಸಲು ವೆಂಕಟಪ್ಪ ಉಪನ್ಯಾಸ ಮುಗಿದ ಮೇಲೆ ಹೋಟಲಿಗೆ ನುಗ್ಗಲು ಕಲಿತಿದ್ದನಾದ್ದರಿಂದ ಆ ಚಾಳಿಯೂ ಈಗ ಅವನ ಬೆನ್ನು ಹಿಡಿದಿದೆ.

2. ಸಾಯಂಕಾಲದ ಉಪನ್ಯಾಸ ಮುಗಿಯುವಾಗ ರಾತ್ರಿ ಒಂಭತ್ತಾಗುತ್ತಿತ್ತು. ಕೇಳಹೋದವರು ಮನೆಗೆ ಬರುವಾಗ ಹತ್ತು ಗಂಟೆಯಾಗುತ್ತಿತ್ತು. ಅದು ತನಕ ಅಡಿಗೆ ಮಾಡಿಟ್ಟುಕೊಂಡು ತೂಕಡಿಸುವುದು ಹೆಂಗಸರ ಪಾಡಾಗಿತ್ತು. ಸ್ವಾಮೀಜೀಯವರು ಹೋದ ಮೇಲೂ ಭಕ್ತರು ರಾತ್ರಿ ತಡಮಾಡಿ ಮನೆಗೆ ಬರುವ ಅಭ್ಯಾಸವನ್ನು ಬಿಡದಿರುವುದು ಮನೆಯವರಿಗೆ ಫಜೀತಿಗಿಟ್ಟುಕೊಂಡಿದೆ.

3. ಮೊದಲೇ ಉಸಿರೆತ್ತಿದರೆ ಫಿಲಾಸಫಿ ಉಗುಳುತ್ತಿದ್ದ ನಮ್ಮ ಕಾಳಿಂಗರಾಯ ಈಗ ಸಹಿಸಲಸಾಧ್ಯವಾಗಿದ್ದಾನೆ. ವೇದಾಂತ ಬಿಟ್ಟು ಬೇರೆ ಸುದ್ದಿ ಎತ್ತಿದರೆ ಕೆಂಡವಾಗುತ್ತಾನೆ "ಕೋಪ ಕೂಡದೆಂದು ಸ್ವಾಮಿಜೀ ಹೇಳಿಲ್ಲವೆ ?" ಎಂದರೂ ಅದನ್ನು ಕಿವಿಗೇ ಹಾಕಿಕೊಳ್ಳುವುದಿಲ್ಲ

4. ಸ್ವಾಮಿಜಿ ಉಪನ್ಯಾಸ ಕೊಡುವಾಗ ನಡುನಡುವೆ ನಶ್ಯ ಸೇವಿಸುವುದನ್ನು ಕಂಡುಕೊಂಡ ನಮ್ಮ ಶೀನಿ ತಾನೂ ಆ ಚಟವನ್ನು ಬಹಳ ಅಭಿಮಾನದಿಂದ ಅಪ್ಪಿಕೊಂಡಿದ್ದಾನೆ.

5. ಜಪಮಾಲೆಯ ಮಹತ್ವವನ್ನು ಸ್ವಾಮೀಜಿ ವರ್ಣಿಸಿದ್ದರ ಫಲವಾಗಿ ಲಂಚಕ ವಂಚಕರೆಲ್ಲ ಮಾಲೆ ಹಿಡಿಯತೊಡಗಿದ್ದಾರೆ. ಮಾತ್ರವಲ್ಲದೆ ಕೊರಳಿಗೂ ಸುತ್ತಿಕೊಳ್ಳತೊಡಗಿ ಮತ್ತಷ್ಟು ಹೊಲಸಾಗಿ ಕಾಣುತ್ತಾರೆ.

6. ಮೊದಲೇ ಭಜನೆಯಲ್ಲಿ ವಿಶ್ವಾಸವಿದ್ದ ಮಂದಿ ಈಗ ಭಕ್ತಿಯಿಂದ ಮತ್ತೇರಿ ಮೈಕ್ ಇಟ್ಟುಕೊಂಡು ಭಜನೆ ಮಾಡತೊಡಗಿರುವುದರಿಂದ ಬಹಳ ಶೋಚನೀಯವಾದ ಪರಿಸ್ಥಿತಿಯುಂಟಾಗಿದೆ ನೆರೆಕರೆಯವರಿಗೆ.

7. ಇನ್ನು ಕೆಲವರು ಸ್ವಾಮೀಜಿಗಳಿಗೆ ದೊರೆತ ಆದರ ಗೌರವಗಳನ್ನು ಕಂಡು ಬೆರಗಾಗಿ ತಾವೇ ಏಕೆ ಕಾವಿಯಾಂಬರಧಾರಿಗಳಾಗಿ ಸಾಲಿಗರ ಕಾಟ, ಸಮಾಜದ ತಾತ್ಸಾರ, ರಾಜಕೀಯ ಸೋಲು ಇವನ್ನೆಲ್ಲ ಇಲ್ಲವೆನಿಸಿಬಿಡಬಾರದು ಎಂದು ಯೋಚಿಸತೊಡಗಿದ್ದಾರೆ.

8. ಮೂರುವಾರಗಳ ಕಾಲ ಬೆಳಗ್ಗೆ ಸಂಜೆ ತಪ್ಪದೆ ಸ್ವಾಮೀಜಿಗಳ ಉಪನ್ಯಾಸ ಕೇಳಿದ್ದೇನೆಂದು ಹೆಮ್ಮೆಯಿಂದ ತಲೆಯನ್ನು ನಭಕ್ಕೆತ್ತಿ ನಡೆಯತೊಡಗಿದವರು ಈಗ ನೆಲ ನೋಡುವುದೇ ಇಲ್ಲ. ಆಗೊಮ್ಮೆ ಈಗೊಮ್ಮೆ ಹೋಗಿ ಸ್ವಾಮೀಜೀಗಳವರ ಎರಡು ಮಾತುಗಳನ್ನು ಕೇಳಿಬಂದವರನ್ನು ಕಂಡರೆ ಸಿಂಬಳದಲ್ಲಿ ಸಿಕ್ಕಿ ಒದ್ದಾಡುವ ನೊಣವನ್ನು ಕಂಡಂತೆ ಮಾಡುತ್ತಾರೆ.

9. ಉಪನ್ಯಾಸಗಳಿರುವಾಗ ರಾತ್ರಿಯ ಅಡುಗೆ ಮಾಡಲು ಬಿಡುವಾಗದೆ ಮಧ್ಯಾಹ್ನದ ತಂಗೂಳನ್ನೇ ಮಕ್ಕಳಿಗೂ ಗಂಡನಿಗೂ ಬಡಿಸಲು ಕಲಿತ ಮಹಿಳಾಮಣಿ ಆ ವ್ಯವಸ್ಥೆಯನ್ನು ಖಾಯಂಗೊಳಿಸಿದ್ದಾರಂತೆ.

10. ಒಂದೇ ದಿನ ಹೋಗಿ ಅರ್ಧ ಉಪನ್ಯಾಸ ಕೇಳಿ ಬಂದ ಇನ್ನೊಬ್ಬಾಕೆ "ಗಂಡ ಮಕ್ಕಳು ಮರಿ ಯಾವುದೂ ಸತ್ಯವಲ್ಲ" ಎಂದು ಮುಂತಾಗಿ ತೊಡಗಿ ಇದ್ದಕ್ಕಿದ್ದ ಹಾಗೆ ಬಹಳ ಸೀರಿಯಸ್ಸಾಗಿದ್ದಾರೆಂದು ಗಂಡ ಗೋಗರೆಯುವಂತಾಗಿದೆ.

ಹೀಗೆ ಪರಿವರ್ತನೆ ಹಲವು ವಿಧಗಳಲ್ಲಿ ಕಂಡುಬಂದಿದೆ.

ಹಾಗಾದರೆ ಸ್ವಾಮೀಜಿ ಹೇಳಿದ ಶಮದಮಾದಿಗಳ ದಾರಿಯಲ್ಲಿ ನಡೆದು ಬದುಕನ್ನು ತಿದ್ದಿಕೊಳ್ಳಲು ಯತ್ನಿಸಿದವರು ಯಾರೂ ಇಲ್ಲವೆ ಎಂದು ಕೇಳಬಹುದು. ಇದ್ದಾರೆ. ಒಬ್ಬರಾದರೂ ಇದ್ದಾರೆ. ಆತ ಏಕೋ ಬೆಟ್ಟಹತ್ತಿ ನಿಂತಿದ್ದಾನೆ. ಅಲುಗಾಡುವುದಿಲ್ಲ ಮಾತಾಡುವುದಿಲ್ಲ. ಅದು ಬೇರೆ ಗೋಳು. ಯಾರಂತೀರಿ? ಗೋಮಟೇಶ್ವರ ಸ್ವಾಮಿ!

—ರಾಮಿ.

ರಾಯರ ನಿರ್ಗಮನ

(ಅ. ಕ. ವಿ. ಪ್ರೇ. ಪ. ಮ್ಯೂಜಿಯಂ)

ಇತ್ತೀಚೆಗೆ, ಮುಗಿಲು ಹಳ್ಳಿಯ ಎಂ. ಎಲ್. ಎ. ಶ್ರೀ ರಾಯರು, ರಾಜ್ಯಾಡಳಿತದ ತುರ್ತು ಕೆಲಸಗಳಿಗೆ ಗಮನ ಕೊಡಲೆಂದು, ರಾಜಧಾನಿಯಲ್ಲೇ ತಮ್ಮ ಖಾಯಂ ಠಿಕಾಣಿಯನ್ನು ಹಾಕಲೆಂದು ಸ್ವಸ್ಥಳವನ್ನು ಬಿಟ್ಟು ನಿರ್ಗಮಿಸಿದರಷ್ಟೆ. ತಮ್ಮ ಕಾನ್ಸಿಟಿಟ್ಯುಯನ್ಸಿಯ ಜೊತೆಗೆ ನಿಕಟ ಸಂಪರ್ಕ ರಾಜಧಾನಿಯಲ್ಲೇ ಹೆಚ್ಚು ಸಾಧ್ಯವೆಂದೂ, ಸೇವಾಕಾರ್ಯಗಳು ಅಲ್ಲಿಯೇ ಹೆಚ್ಚು ಹೆಚ್ಚಾಗಿ ಜರುಗುವುದೆಂದೂ ರಾಯರು ಹೇಳಿದುದಾಗಿ ಕುಹಕ ವದಂತಿಗಳಿವೆ. ರಾಜಧಾನಿಗೆ ಹೋಗುವ ಮುನ್ನ, ಶಾಲಾ ದಿನ ಸಮಾರಂಭದ ಅಧ್ಯಕ್ಷತೆಯನ್ನು ರಾಯರು ವಹಿಸಿದ್ದರು. ಅವರು ಅನ್ಯಮನಸ್ಕರಾದಂತೆ ತೋರಿ ಬಂತೆಂದು ಪತ್ರಿಕಾ ಪ್ರತಿನಿಧಿಗಳು ಪಿಸುಗುಟ್ಟುತ್ತಿದ್ದಾರೆ. ಅವರ ಮುಖದಲ್ಲಿ ಗುಪ್ತ ವೇದನೆ ಸ್ಪಷ್ಟವಾಗಿ ಮೂಡಿತ್ತಂತೆ. ಅಧ್ಯಕ್ಷ ಭಾಷಣ ಮಾಡುತ್ತಾ ರಾಯರು ಹೇಳಿದರು. "ಶಾಲೆಯವರು ನಡೆಸುತ್ತಿರುವ ಸೇವೆ ನಿಜಕ್ಕೂ ಅಮೋಘವಾದುದು. ಖಾಸಗೀ ಶಾಲೆಯಾದ ಇಲ್ಲಿ, ಇನ್ನೆಲ್ಲೂ ಕಾಣದ ಚಟುವಟಿಕೆ ಕಂಡುಬರುತ್ತದೆ. ಆದರೆ ಶಾಲೋಪಾಧ್ಯಾಯರು ನನ್ನಲ್ಲಿ ಮಾಡಿಕೊಂಡ ಮನವಿಯನ್ನು ಗಮನಿಸಿದರೆ, ಶಾಲೆಯು ಸದ್ಯದಲ್ಲೇ ಪ್ರಾಚೀನ ವಸ್ತು ಸಂಗ್ರಹಾಲಯಕ್ಕೆ ಸೇರುವಂತೆ ತೋರುತ್ತದೆ." ಹೀಗೆ ಹೇಳಿದೊಡನೆ ರಾಯರು, ತಮ್ಮೆರಡು ಮುಖಗಳನ್ನೂ ಕೈಗಳಿಂದ ಮುಚ್ಚಿಕೊಂಡು ಹತ್ತು ನಿಮಿಷ ಅಪ್ರತಿಭರಾಗಿ ನಿಂತುಬಿಟ್ಟರಂತೆ. ಅವರನ್ನು ಒಳಗೆ ಕರೆದೊಯ್ದು, ಉಪ್ಪೋಪಚಾರಗಳನ್ನು ಮಾಡಿದ ಮೇಲೆ ಅವರು ಬಂದು "ಎಲ್ಲ ಶಾಲೆಗಳಲ್ಲೂ, ಸಂಘಗಳಲ್ಲೂ ವಸ್ತು ಸಂಗ್ರಹಾಲಯಗಳಿರಲೇಬೇಕು ಎಂಬುದೇ ನನ್ನ ಅಭಿಪ್ರಾಯ" ಎಂದು ಭಾಷಣ ಮುಗಿಸಿ, ವಿಸ್ಮಯಚಕಿತರಾದ ಜನರು ನೋಡು ನೋಡುತ್ತಿರುವಂತೆಯೇ ಸಭಾತ್ಯಾಗ ಮಾಡಿಬಿಟ್ಟರು. ಆ ದಿನ ಸಂಜೆಯೇ ಗುಡಿಚಾಪೆ ಕಟ್ಟಿ ರೈಲು ಹತ್ತಿಬಿಟ್ಟರು.

ಮರು ದಿನ ಸಂಜೆ ವಿಜಯಕೆಫೆಯ ಮೂರನೆಯ ಮಹಡಿಯ ಮೇಲೆ ಅಖಿಲ ಕರ್ಣಾಟಕ ವಿಫಲಪ್ರೇಮ ಪರಿಷತ್ತಿನ ಅಧ್ಯಕ್ಷರೂ, ಕಾರ್ಯದರ್ಶಿಗಳೂ ಕಾಫಿ ಹೀರುವುದನ್ನು ಮುಗಿಸಿ, ಸಿಗರೇಟು ಸೇದುತ್ತಾ ಚಿಂತಾಕ್ರಾಂತರಾಗಿ ಕುಳಿತಿದ್ದರು. ಇಬ್ಬರೂ ಮಾತಾಡುತ್ತಿರಲಿಲ್ಲ; ಅಷ್ಟರಲ್ಲಿ ಬಳೆಗಳ ಸದ್ದು ಕೇಳಿಸಿತು. ಯಾವುದೋ

ಸರಸರ ಸದ್ದು. ಇಬ್ಬರೂ ಗಕ್ಕನೆದ್ದು ಮತ್ತೆ ಕುಳಿತರು. ಕೊಕ್ಕರೆಗಳಂತೆ ಕತ್ತು ನೀಡಿ ಬಾಗಿಲ ಕಡೆಗೆ ನೋಡಿದರು. ಚಳಿಗಾಳಿ ಪೂರ್ವದಿಂದ ಬೀಸಿ ತರಗೆಲೆಗಳನ್ನು ಕೋಣೆಯೊಳಕ್ಕೆ ತೂರಿತು. ಚಂದ್ರನಂತಾಗಿದ್ದ ಸೂರ್ಯ ತನ್ನ ಅಸ್ತಮಯ ಕಾಲದಲ್ಲಿ ಬೆಳುದಿಂಗಳಂತಹ ಹೊಂಬಿಸಿಲನ್ನು ಪಶ್ಚಿಮದಿಂದ ಪೂರ್ವಕ್ಕೆ ಹರಿಸುತ್ತಿದ್ದ. ಕೆಳಗಡೆಯಿಂದ ರೇಡಿಯೋ ಗೀತೆ ಕೇಳಿಬಂತು. "ಬಿದಿಗೆಯ ಬಿಂಬಾ ಧರದಲ್ಲಿ ಇಂದಿಗು, ಮಿಲನದ ಚಿನ್ಹವು ತೋರದಿದೇ....". ಅಧ್ಯಕ್ಷರು ಹೇಳಿದರು "ಅದು ಸುಳ್ಳು. ತೋರದಿದ್ದರೆ ಆಗುವ ದುಃಖ ಅಷ್ಟರಲ್ಲೇ ಇತ್ತು. ಅದರದು ತೋರಿ ಅಡಗಿತು." ಆಗ ಕಾರ್ಯದರ್ಶಿ ಬಿಸುಸುಯ್ದು ನುಡಿದ "ಭನ್ತೇ ಜೀವನವು ದುಃಖಮಯ. ಆಶೆಯೇ ದುಃಖದ ಮೂಲ" ಅಧ್ಯಕ್ಷರು "ಆದರೆ ಭಿಕ್ಕು, ತಥಾಗತನ ಮಾತನ್ನು ಲೆಕ್ಕಿಸದೆ ಜೀವಿಗಳು "ಪ್ರೇಮಂ, ಶರಣಂ ಗಚ್ಛಾಮಿ" ಎನ್ನುವರಲ್ಲಾ Flesh is weak" ಎಂದರು. ಅಷ್ಟರಲ್ಲಿ ನವಯುವತಿಯೊಬ್ಬಳು, ಕರವಸ್ತ್ರದಿಂದ ಮುಖವನ್ನೊರೆಸಿಕೊಳ್ಳುತ್ತಾ ಕೋಣೆಯನ್ನು ಪ್ರವೇಶಿಸಿದಳು. ಕೋಣೆ ಬೆಳಕಾಯ್ತು. "ಇದೇನು ದೀಪ ಹತ್ತಿತೇ !" ಎಂದು ಕಾರ್ಯದರ್ಶಿಗಳು ನೋಡಿದರು. ಹತ್ತಿರಲಿಲ್ಲ. "ಚಂದ್ರೋದಯವಾಯ್ತು" ಎಂದರು. ಆ ಯುವತಿ ಒಂದು ಪುಷ್ಪ ಕುಂಡವನ್ನು ಕೈಲಿ ಹಿಡಿದಿದ್ದವಳು, ಅಧ್ಯಕ್ಷರ ಮೇಜಿನ ಮೇಲಿಟ್ಟು, ದ್ರುತಗತಿಯಿಂದ ಮೂಲೆಯೊಂದಕ್ಕೆ ಹೋಗಿ ಬಿಕ್ಕಿ ಬಿಕ್ಕಿ ಅಳುತ್ತಾ ಮೇಜಿನ ಮೇಲೆ ಮುಖವಿಟ್ಟು ಕುಳಿತುಬಿಟ್ಟಳು. "ಅಳಲಿ, ಅತ್ತರೆ ಒಳ್ಳೆಯದು" ಎಂದು ಅಧ್ಯಕ್ಷರು ಯುವತಿಯ ಕಡೆಗೆ ಕರುಣಾ ದೃಷ್ಟಿಯನ್ನು ಬೀರಿ ನುಡಿದರು.

ಕಾರ್ಯದರ್ಶಿ ಪುಷ್ಪಕುಂಡವನ್ನು ಬಳಿಗೆಳೆದುಕೊಂಡ. ಮೇಲೆ ಕಂಡುಬಂದ ಹೂಗಳು ಕಂದುಬಣ್ಣಕ್ಕೆ ತಿರುಗಿದ್ದವು. ಒಣಗಿ ಹೋಗಿ ಎಷ್ಟೋ ದಿವಸಗಳಾಗಿರಬಹುದು. ಅದರ ಕೆಳಗೆ ಬ್ಯಾಂಡೇಜ್ ಪಟ್ಟಿಗಳು. ಅವು ರಕ್ತಸಿಕ್ತವಾಗಿ ಒಂದೆರಡು ವರ್ಷಗಳಾಗಿರಬಹುದು. ಅದರ ಕೆಳಗೆ ಒಂದು ಕಬ್ಬಿಣದ ಚೂರು. ಅದರ ಕೆಳಗೆ ಒಂದು ಲಾರಿಯ ಫೋಟೋ (ಫೋಟೋದ ಬಲಭಾಗದಲ್ಲಿ ಸೀರೆಯೊಂದರ ಸೆರಗು ಮಾತ್ರ) ಎಲ್ಲಕ್ಕೂ ಕೆಳಗೆ ಒಂದು ಬೀಡಿಯ ತುಂಡು. 'ಏ, ಕ್ಯಾ' ಎಂದರು ಕಾರ್ಯದರ್ಶಿಗಳು. "ತಳಬುಡವೇ ತಿಳಿಯಲಿಲ್ಲವಲ್ಲಾ?" ಆಗ ಅಧ್ಯಕ್ಷರು ಆ ಪುಷ್ಪ ಕುಂಡವನ್ನು ಎತ್ತಿ ತಲೆಕೆಳಗು ಮಾಡಿದರು. ಒಂದು ಕಾಗದ ಕೆಳಗೆ ಬಿತ್ತು. ಅದರಲ್ಲಿ ಹೀಗೆ ಬರೆದಿತ್ತು.

ಅ. ಕ. ವಿ. ಪ್ರೇ. ಪ. ಅಧ್ಯಕ್ಷರ ಸ|| ಕ್ಕೆ||

ತಥಾಗತ,

ಆಕವಿಪ್ರೇಮಕ್ಕೆ ಒಂದು ಮ್ಯೂಸಿಯಂ ಅತ್ಯವಶ್ಯಕ. ಅದಕ್ಕಿದು ನನ್ನ ಕಾಣಿಕೆ. ಮ್ಯೂಸಿಯಂ ಇತೋಽಪ್ಯತಿಶಯವಾಗಿ ಬೆಳೆಯಲಿ.

ಇಂತು,
ಭಿಕ್ಕು ರಾಯ.

"ಇದರರ್ಥವೇನು ?" ಎಂದು ಕೇಳಿದರು ಕಾರ್ಯದರ್ಶಿಗಳು. ಅಧ್ಯಕ್ಷರು ಹೇಳಿದರು.

"ಇದು ವಿಧಿಯ ಕಠೋರ ಹಾಸ. ಈ ರಾಯು ಇನ್ನಾರೂ ಅಲ್ಲ, ಕಳೆದ ಚುನಾವಣೆಗಳಲ್ಲಿ ನಮ್ಮ ಪರಿಷತ್ತು ಬೆಂಬಲ ಕೊಟ್ಟಿದ್ದ ರಾಯುನೇ. ಅದರೆ ಅವನು ನಮ್ಮ ಪರಿಷತ್ತಿನ ಸದಸ್ಯನಾಗುವನೆಂದು ಯಾರಿಗೂ ಗೊತ್ತಿರಲಿಲ್ಲ. ನನಗೇನೋ ಸಂದೇಹವಿತ್ತು. ಅದು ಇಂದು ಪರಿಹಾರವಾಯಿತು. ಅವನು ನಮ್ಮ ಪರಿಷತ್ತಿನ ಸದಸ್ಯನಾಗಲು ಕಾರಣವೆಲ್ಲಾ ಗೊತ್ತಿದೆ. ಆದರೆ ಅವನ ಪ್ರೇಮೇತಿಹಾಸವನ್ನು ನಾನು ಬಲ್ಲೆ.

ರಾಯುನೂ ನಾನೂ ಸಹಪಾಠಿಗಳು. ನಾನು ಕಾಲೇಜನ್ನು ಅರ್ಧಕ್ಕೇ ಬಿಟ್ಟುಬಿಟ್ಟೆ, ಅವನು ಓದಿ ಪದವೀಧರನಾದ. ಯಾರು ಕೇಳಬೇಕು ಅವನ ಪದವಿ ಯನ್ನು? ಎಂ ಎ ಆದವರೇ ಎಷ್ಟೋ ಕಟ್ಟುವ ಕಾಲದಲ್ಲಿ? ಅವನು ಅಲ್ಲಿ ಇಲ್ಲಿ ಅಲೆದು ಕೆಲಸ ಸಿಗದೆ, ನಿರಾಶನಾಗಿ ಕೊನೆಗೆ ಲಾರಿ ಟ್ರಾನ್ಸ್‌ಪೋರ್ಟ್ ಕಂಪೆನಿಯಲ್ಲಿ ಬುಕ್ಕಿಂಗ್ ಗುಮಾಸ್ತನಾದ. ಹಗಲೂ ರಾತ್ರಿ ಕತ್ತೆ ದುಡಿದ ಹಾಗೆ ದುಡಿಯಬೇಕಾ ಗಿತ್ತು. ಗೋಡೌನುಗಳ ಮುಂದೆ ನಾಯಿಯಂತೆ ಅಲೆಯುತ್ತಿದ್ದ. ಅವನ ಬಾಳಿನಲ್ಲಿ ಆಶೆಯ ಸೆಲೆ ಕಮರಿಹೋಯಿತು. ಅವನಿಗೆ ಬಾಳು ಶೂನ್ಯವಾಗಿತ್ತು. ಅವನು ಜೀವನಗೀತೆ ಡೀಸೆಲ್ ಎಂಜಿನಿನ ಸದ್ದಿನಂತಿದೆಯೆಂದು ಭಾವಿಸಿದ್ದ.

ಆದರೆ ಪ್ರೇಮದೇವತೆ ಬೇರೊಂದನ್ನೆಣಿಸಿತ್ತು. ಒಂದು ದಿನ ಅವನಿಗೆ ಆಫೀಸಿನಲ್ಲಿ ಬಹಳ ಕೆಲಸವಿತ್ತು. ಬೆಳಗಿನಿಂದ, ರಶೀದಿಗಳು, ಗೇಟ್‌ಪಾಸಿಗಾಗಿ ಪ್ರಾರ್ಥನೆಗಳು,-ಹಳೆಯ ಲೆಕ್ಕಗಳು, ಮೇಲಾಫೀಸಿಗೆ ರಿಪೋರ್ಟುಗಳು, ಅಂಗಡಿ ಗಳಿಗೆ ಮಾಲು ಇದೆಯೇ ಎಂದು ಪ್ರಶ್ನಿಸಿ ಬರೆದ ಕಾಗದಗಳು, ಇತ್ಯಾದಿಗಳನ್ನು ಬರೆದು ಅವನು ಸುಸ್ತಾಗಿ ಹೋಗಿದ್ದ. ಸತತವಾಗಿ ಫೋನ್ ಗಂಟೆಯ ಸದ್ದು ಕೇಳಿ ಕಿವಿಗಳು ಗಡಚಿಕ್ಕಿದ್ದವು. ಒದರಿ ಒದರಿ ಗಂಟಲು ಒಣಗಿ ಹೋಗಿತ್ತು. ಅವನಿಗೆ ಬೇಸರವಾಗಿ ಆಫೀಸಿನ ವರಾಂಡಕ್ಕೆ ಬಂದ. ಅವನಿದ್ದ ಆಫೀಸು ಹಳೇ ಮಂಡಿ ಪೇಟೆಯ ಹಳೆಯ ಮನೆಯೊಂದರ ಮಹಡಿಯ ಮೇಲೆ. ಅವನು ಬಂದಾಗ ಬಿಸಿಲು ರಣರಣಗುಡುತ್ತಿತ್ತು. ಕೆಳಗೆ ಲಾರಿಗಳು ಭೈರವ ಬೃಂಹಿತವನ್ನು ನಡೆಸಿದ್ದವು ನೊಣಗಳು ಗಾಳಿಯನ್ನೆಲ್ಲಾ ತುಂಬಿದ್ದವು ಧೂಳು ಗಗನವನ್ನು ಚುಂಬಿಸಿತ್ತು. ಅಷ್ಟರಲ್ಲಿ ಮರುಭೂಮಿಯ ನಡುವೆ ಓಯಸಿಸ್ಸಿನಂತೆ ಒಬ್ಬ ತರುಣಿ ಆ ರಸ್ತೆಯಲ್ಲಿ ಕಂಡು ಬಂದಳು. ರಾಯು, ತನ್ನ ಆಫೀಸಿನ ಪಕ್ಕದಲ್ಲಿದ್ದ ಫೋಟೋ ಸ್ಟುಡಿಯೋಕ್ಕೆ ನುಗ್ಗಿ ಸ್ನ್ಯಾಪ್ ಹೊಡೆಯಲೆಂದು ಒಂದು ಕ್ಯಾಮರ ತೆಗೆದುಕೊಂಡು ಬಂದ. ಅಷ್ಟರಲ್ಲಿ ರಸ್ತೆಯ ಆಚೆಗೆ ಒಂದು ಕಾರ್ ಬಂದು ನಿಂತುದೂ, ಅದರಿಂದಿಳಿದ ಒಬ್ಬ ಸೂಟಿವಾಲಾ ತನ್ನ ಆಫೀಸಿನ ಕಡೆಗೆ ಬಂದುದೂ ಅವನಿಗೆ ಗೊತ್ತಾಗಲಿಲ್ಲ. ಅವನು

ಕ್ಯಾಮರಾ ಅಡ್ಜಸ್ಟ್ ಮಾಡುವಷ್ಟರಲ್ಲಿ ಆ ತರುಣಿ ತೀರ ಹತ್ತಿರಕ್ಕೆ ಬಂದಳು. ಸ್ನ್ಯಾಪ್ ಹೊಡೆದಾಗ ಒಂದು ಲಾರಿಯೂ, ಆವಳ ಸೀರೆಯ ಸೆರಗೂ ಮಾತ್ರ ಫೋಟೋದಲ್ಲಿ ಬಿದ್ದವು. "Thank you, my unknown dove'" ಎಂದು ರಾಯ ಹಿಂತಿರುಗಿದ ಅವನ ಕಂಪನಿಯ ಜನರಲ್ ಮ್ಯಾನೇಜರು ಕಣ್ಣು ಕೆಂಪುಮಾಡಿ ಕ್ರೋಧಾಕ್ರಾಂತನಾದ ಅಗ್ನಿಯಂತೆ ನಿಂತಿದ್ದರು. ರಸ್ತೆಯ ಕಡೆಗೆ ತಿರುಗಿದ ತರುಣಿ ಮುಂದುವರೆಯುತ್ತಿದ್ದಳು. ರಾಯ, ಕಾಲ ಒದಗಿ ಬಂದಿತೆಂದು ಕೊಂಡ. ಹಾರಿ, ಅಲ್ಲಿಂದ ರಸ್ತೆಗೆ ಹಾರಿ, ಅವಳನ್ನು ಹಿಂಬಾಲಿಸಿದ.

ಕೆಲವೇ ದಿನಗಳೊಳಗಾಗಿ ಅವಳ ಬಗೆಗೆ ಅನೇಕ ಅಂಕಿ ಅಂಶಗಳನ್ನು ಸಂಗ್ರಹಿಸಿಕೊಂಡು, ನನ್ನೆಡೆಗೆ ಸಮಾಲೋಚನೆಗಾಗಿ ಬಂದ. ಅವನು ಸಂಗ್ರಹಿಸಿದ ಅಂಶಗಳಿವು.

ಅವಳ ಹೆಸರು ಸುಚಿತ್ರಾ. ವಯಸ್ಸು ಹದಿನೆಂಟು. ಕಾಲೇಜಿನಲ್ಲಿ ಓದುತ್ತಿದ್ದಾಳೆ ಅವಳ ಅಪ್ಪನ ವಿಳಾಸ 1st cross road ಹೆಲ್. ವಕೀಲನಾಗಿದ್ದನಂತೆ. ಅವಳ ಚಿಕ್ಕಪ್ಪ ರಾಜಧಾನಿಯಲ್ಲಿ ನ್ಯಾಯಾಧಿಪತಿಯಾಗಿದ್ದನಂತೆ. ಇನ್ನೊಂದು ವಿಚಿತ್ರ ಅಂಶ ಅವಳು Most beautiful girl in the world ಮತ್ತೊಂದು ಅವಳು ರಾಯನ ಹೃದಯವನ್ನು ಕದ್ದುಬಿಟ್ಟಿದ್ದಳಂತೆ.

ಇಷ್ಟೆಲ್ಲಾ ಅಂಶಗಳನ್ನು ತಿಳಿಸಿದ ಮೇಲೆ "ಮುಂದೇನು ? ನನ್ನ ಹೃದಯವನ್ನೇನೋ ಅವಳು ಕದ್ದಳು ? ಅದಕ್ಕೆ ಪ್ರತಿಯಾಗಿ ಅವಳ ಹೃದಯವನ್ನು ಕದಿಯುವ ಬಗೆಯೇನು ?" ಎಂದವನು ನನ್ನನ್ನು ಪ್ರಶ್ನಿಸಿದ.

"ನಿನ್ನ ಹೊಟ್ಟೆಪಾಡಿಗೆ ಗತಿಯೇನು ?" ಎಂದು ಕೇಳಿದೆ ಅವನು ತಲೆ ಕೆರೆದುಕೊಂಡು ಅದಕ್ಕೂ ನೀನೇ ಉತ್ತರ ಕೊಡು ಎಂದ. "ಹೇಗಿದ್ದರೂ ಎಲೆಕ್ಷನ್ ಹತ್ತಿರಕ್ಕೆ ಬಂತು. ಅದಕ್ಕೆ ನಿಂತರಾಯ್ತು" ಎಂದೆ. "ಠೇವಣಿ ಹಣಕ್ಕೆ ?" ಎಂದು ಕೇಳಿದ. ನಾನು ನನ್ನ ಕೈಯಿಂದಲೇ ಹಣ ಕೊಟ್ಟೆ. ಅವನು ಸ್ವತಂತ್ರ ಉಮೇದುವಾರನಾಗಿ ಎಲೆಕ್ಷನ್ನಿಗೆ ಸ್ಪರ್ಧಿಸಿದ ಆಗ ಈ ಊರಿನ ರಾಜಕೀಯ ಹದಗೆಟ್ಟಿತ್ತು. ಕಾಂಗ್ರೆಸ್, P. S. P., ಸೋಷಲಿಷ್ಟ್, ಇತ್ಯಾದಿಯಾದ ಯಾವ ಪಕ್ಷಕ್ಕೂ ಬೆಂಬಲವಿರಲಿಲ್ಲ ಈ ಊರಿನ ರಾಮಭೋಶ್ವರ ಭಕ್ತರಿಗೂ, ಉಲ್ಲುಕೇಶ್ವರ ಭಕ್ತರಿಗೂ, ಮಾರಾಮಾರಿ ನಡೆದಿತ್ತು. ಅವರ ಪಾರ್ಟಿಗಳಿಂದ ಕತ್ತಿ ಸಂಕಣ್ಣನೂ, ಗೂಗೆ ಬಸಣ್ಣನೂ ಚುನಾವಣೆಗೆ ನಿಂತಿದ್ದರು. ಒಬ್ಬನ ಗುರುತು ಕತ್ತಿ ಒಬ್ಬನದು ಗೂಗೆ. ಆಗ ರಾಯ ಬುದ್ಧಿ ಓಡಿಸಿ ಸುಂದರ ತರುಣಿಯ ಗುರುತನ್ನು ತನ್ನ ಸಂಕೇತವಾಗಿ ಆರಿಸಿ "ಸ್ವಪ್ನ ಸುಂದರಿಗೇ ಓಟು ಕೊಡಿ" ಎಂದು ಪ್ರಚಾರ ನಡೆಸಿದ ಸ್ತ್ರೀ ಸ್ವಾತಂತ್ರ್ಯಕ್ಕಾಗಿ, ಸ್ತ್ರೀಯರ ಘನತೆ ಗೌರವಗಳಿಗಾಗಿ

ತಾನು ಹೊಡೆದೋಡಿಸುವುದಾಗಿ ಆಶ್ವಾಸನ ನೀಡಿದ. ಸ್ತ್ರೀಯರನ್ನೆಲ್ಲಾ ವೈಯಕ್ತಿಕವಾಗಿ ಪ್ರಾರ್ಥಿಸಿ ಅವರ ಓಟುಗಳನ್ನು ಪಡೆಯಲು ಸಂಚುಮಾಡಿದ. ಆಸಂದರ್ಭದಲ್ಲಿ ಸುಚಿತ್ರಾಳ ಪರಿಚಯ ಮಾಡಿಕೊಂಡು, ಅವಳ ಸಹಕಾರವನ್ನು ಬೇಡಿದ. ಅವಳು ಒಪ್ಪಿಕೊಂಡಳು. ಎಲೆಕ್ಷನ್ ತರಾತುರಿಯಿಂದ ನಡೆಯಿತು ರಾಯನಿಗೆ ಚೆನ್ನಾಗಿ ಒದೆಗಳೂ ಬಿದ್ದವು. ಆಗ ಸುಚಿತ್ರಾ ಅವನಿಗೆ ಬ್ಯಾಂಡೇಜ್ ಕಟ್ಟಿ ಉಪಚರಿಸಿದಳು. ಎಲೆಕ್ಷನ್ನಿನಲ್ಲಿ ರಾಯ ಗೆದ್ದುಬಿಟ್ಟ ಆ ಕತೆಯನ್ನು ಕವಿಗಳು ಕಾವ್ಯದಲ್ಲೂ, ಕತೆಗಾರರು ಕಾದಂಬರಿಗಳಲ್ಲೂ ವರ್ಣಿಸಿದರು ಪ್ರಜಾಸತ್ತೆಯನ್ನು ಉದ್ಧರಿಸಲೆಂದು ರಾಯ ಅವತರಿಸಿದನೆಂದು ವಿಚಾರ ಪರರೆಲ್ಲಾ ಬಗೆದರು.

ಆದರೆ ರಾಯನಿಗೆ ಬೇಕಾಗಿದ್ದುದು ಪ್ರಜಾಸತ್ತೆಯ ಉದ್ಧಾರವಲ್ಲ ಅದನ್ನು ಮಾಡಲೆಂದೇ ಅಮೆರಿಕನ್ನರು, ರಷ್ಯನ್ನರು, ಅಯೂಬ್ ಖಾನ್ ಡಿಗಾಲೆ, ಮೊದಲಾದವರು ಈಗಲೂ ಆಗಲೂ ಶ್ರಮಿಸುತ್ತಿರುವಲ್ಲವೆ. ಆದುದರಿಂದ ರಾಯ ಅದರ ಬಗೆಗೆ ತಾತ್ಸಾರ ತೋರಿಸಿದ್ದು ಆಶ್ಚರ್ಯವಲ್ಲ. ಅವನಿಗೆ ಬೇಕಾಗಿದ್ದುದು ಸುಚಿತ್ರಾಳ ಹೃದಯ. ಅದಕ್ಕಾಗಿ ಅವನು ತಿಪ್ಪರಲಾಗ ಹಾಕಿದರೂ ಅವನಿಗದು ಸಿಗಲಿಲ್ಲ. ಏಕೆಂದರೆ 'ನಿನ್ನನ್ನು ಪ್ರೀತಿಸುತ್ತೇನೆ' ಎಂದು ಹೇಳಲು ರಾಯನಿಗೆ ಧೈರ್ಯವೇ ಇರಲಿಲ್ಲ.

ಹೀಗಿರುವಾಗ ಆಚಾರ್ಯ ವಿನೋಬಾ ಮುಗಿಲು ಹಳ್ಳಿಗೆ ಬಂದರು. ಅವರಿಂದ ಹೃದಯ ಪರಿವರ್ತನಾ ಮಾರ್ಗವೇ ಶ್ರೇಷ್ಠ ತಮವಾದುದೆಂದು ರಾಯ ತಿಳಿದುಕೊಂಡ. ಆದುದರಿಂದ ಅವನು ಸುಚಿತ್ರಾ ಬಳಿಗೆ ಹೋಗಿ ಪ್ರತಿದಿನವೂ ಸಮಯದಾನ ಮಾಡು ಎಂದು ಪ್ರಾರ್ಥಿಸಿ ಅವಳನ್ನು ಒಪ್ಪಿಸಿದ. ಹಾಗೆ ಸಿಕ್ಕ ಸಮಯದಲ್ಲಿ ಅವಳ ಚರಿತ್ರೆಯನ್ನೂ ಮನೋಭಾವಗಳನ್ನೂ ಕೂಲಂಕುಷವಾಗಿ ತಿಳಿದುಕೊಂಡು, ಅವಳ ಅಭಿಪ್ರಾಯಗಳೇ ತನ್ನ ಅಭಿಪ್ರಾಯಗಳೆಂದು ತಿಳಿಸಿದ ತನ್ನ ಜೀವನ ಚರಿತ್ರೆಯನೆಲ್ಲಾ ಹೇಳಿದ್ದಲ್ಲದೆ ರೋಮಿಯೋ, ಮಜನೂ, ಮಹಿವಾಲ್, ಮೊದಲಾದವರ ಚರಿತ್ರೆಯನ್ನು ಅವಳಿಗೆ ತಿಳಿಸಿ ಈಗೊಂದು ತಿಂಗಳ ಹಿಂದೆ ಸುಚಿತ್ರಾಳಿಂದ ಪ್ರೇಮದಾನವನ್ನು ಬೇಡಿದ. ಅವಳು ಕೊಟ್ಟುಬಿಟ್ಟಳು.

ಆದರೆ ಅವಳ ಚಿಕ್ಕಪ್ಪ ಅದಕ್ಕೊಪ್ಪಲಿಲ್ಲ. 'ರಾಜಕಾರಣಿಗಳು ಪ್ರೀತಿಗೆ ಅನರ್ಹರು' ಎಂದು ತನ್ನ ಅಣ್ಣನ ಮಗಳಂಥ ಗಿಣಿಯನ್ನು ರಾಯನಂಥ ಸಿಂಗಳೀಕನಿಗೆ ಕೊಡಲು ಸಾಧ್ಯವೇ ಇಲ್ಲ ಎಂದು ಬಿಟ್ಟ.

ರಾಯನಿಗೆ ಸಿಡಿಲು ಬಡಿಯಿತು. ಅವನ ಮನೆ ಸ್ಮಶಾನವಾಯ್ತು, ಬಾಳು ಶೂನ್ಯವಾಯ್ತು. ರಾಜಕಾರಣ ಮರೆತು ಹೋಯ್ತು. ಈ ಊರಿನಲ್ಲಿರಲು ಅವನಿಗೆ ಬೇಕಾಗಲಿಲ್ಲ. ಊರು ಬಿಟ್ಟು ಹೋದ. ತನ್ನ ಗತ ಜೀವನದ ಕುರುಹುಗಳನ್ನು

ಸಂಗ್ರಹಿಸಿ ಅವನೀಗ ವಸ್ತು ಸಂಗ್ರಹಾಲಯವನ್ನೇರ್ಪಡಿಸಬೇಕೆಂಬ ಸೂಚನೆ ಯೊಂದಿಗೆ ಕಳಿಸಿದ್ದಾನೆ." ಎಂದು ಕತೆ ಮುಗಿಸಿದರು.

"ಆದರೆ ಇಂತಹ ವಸ್ತುಗಳನ್ನೇಕೆ ಸಂಗ್ರಹಿಸಬೇಕು. ಇದರರ್ಥ ಹೇಳುವವ ರಾರು ?" ಎಂದು ಕಾರ್ಯದರ್ಶಿಗಳು ಕೇಳಿದರು. ಸುಚಿತ್ರಾ ಎದ್ದು ನಿಂತು ಅವರಕಡೆಗೆ ಹೋಗಿ ಹೇಳಿದಳು.

"ಇದು ನನ್ನ ಪ್ರಿಯ ತಮನು ತೆಗೆದ ನನ್ನ ಫೋಟೋ. ನನ್ನ ಸೀರೆ ಯಂಚು ಮಾತ್ರ ಕಂಡು ಬರುತ್ತಿದೆ. ನನ್ನನ್ನು ನೋಡುತ್ತಿದ್ದುದರಿಂದ ಸಿಟ್ಟಾದ ಟ್ರಾನ್ಸ್‌ಪೋರ್ಟ್ ಕಂಪನಿ ಜನರಲ್ ಮ್ಯಾನೇಜರು ನನ್ನ ಪ್ರಿಯನ ಕಡೆಗೆಸೆದ ಕಬ್ಬಿಣದ ತುಂಡು. ನನ್ನ ಪ್ರಾಣಕಾಂತನು ಚುನಾವಣೆಯಲ್ಲಿ ಹೊಡೆತ ತಿಂದಾಗ ನಾನು ಸ್ವಹಸ್ತದಿಂದ ಕಟ್ಟಿದ ಬ್ಯಾಂಡೇಜ್ ಬಟ್ಟೆಗಳು ಇವು ಈ ಪುಷ್ಪ ಕುಂಡವೂ, ಹೂವುಗಳೂ ನನ್ನ ಹೃದಯಾಧಿ ದೇವತೆ, ನನ್ನನ್ನು ಪ್ರೇಮದಾನ ಕೇಳಿದ ದಿನ ನನಗೆ ಕೊಟ್ಟ ಪ್ರೆಸೆಂಟ್ಸ್. ಪ್ರೇಮ ಭಗ್ನವಾಗಿ, ಬಾಳು ಬೇಸರ ಬಂದು ಊಟ, ಉಡಿಗೆ, ತಿಂಡಿ, ಕಾಫಿ, ಸಿಗರೇಟ್ ಮೊದಲಾದುವನ್ನು ತ್ಯಜಿಸಿ ವಿರಾಗಿಯಾದ ಮೇಲೆ ಸೇದಿದ ಮೊದಲ ಬೀಡಿಯ ತುಂಡಿದು"

ಹೀಗೆ ಹೇಳಿ ಸುಚಿತ್ರಾ ಮೂರ್ಛಿತಳಾದಳು. ಅವಳನ್ನು ನೋಡಿ ಅಧ್ಯಕ್ಷರೂ ಕಾರ್ಯದರ್ಶಿಗಳೂ ಧಾರಾಕಾರವಾಗಿ ಕಂಬನಿ ಹರಿಸಿದರು. ಸುಚಿತ್ರಾ ಎಚ್ಚೆತ್ತಳು.

"ಮ್ಯಡಾಂ ಚಿಂತಿಸಬೇಡಿ. ನಾಳೆ ಎಲ್ಲ ಸರಿಹೋದೀತು. ಯಾರು ಬರಿಯ ಸುಖ ಬರಿಯ ದುಃಖಪಟ್ಟವರು ಲೋಕದಲ್ಲಿ" ಎಂದರು ಅಧ್ಯಕ್ಷರು.

—ಅ. ರಾ. ಸೆ.

ಹಾದಿಯಲ್ಲಿ ಕೇಳಿಸಿದುದು

"ನೋಡಿ ಕಂಪೆನಿಯಿಂದಲೇ ಬೀಜಗಳನ್ನು ತರಿಸಿದೆ. ಭೂಮೀನ ಚೆನ್ನಾಗಿ ಅಗೆಯಿಸಿ ಕಂಪೆನೀದೇ ಗೊಬ್ರ ಹಾಕಿ ಬೀಜಗಳನ್ನು ಬಿತ್ತಿದೆ. ಪುನಃ ಗೊಬ್ರ ಮುಚ್ಚಿದೆ. ಸಾಕಷ್ಟು ನೀರೂ ಚೆಲ್ಲಿಸಿದೆ. ಮೂರು ತಿಂಗಳು ಕೃಷಿಯಾಯ್ತು. ತೊಂಭತ್ತು ಮೂರಲಿ—ಇನ್ನೂರೆಪ್ಪತ್ತು ಆಳು ಕೆಲಸವಾಯ್ತು. ಬೀಜವೂ ಪತ್ತೆ ಇಲ್ಲ. ಗೊಬ್ರವೂ ಪತ್ತೆಯಿಲ್ಲ"

ದೀಪಾವಳಿ

ಹೆಣ್ಣು ಹುಟ್ಟುವ ಮೊದಲೇ ಗಂಡು ಹುಟ್ಟಿತು, ನೋಡಾ !
ಹಣ್ಣು ತಿನ್ನುವ ಮೂದಲೇ ಸಿಪ್ಪೆ ತೆಗಿಯೋ !
ದೀವಳಿಗೆ ಹಬ್ಬಕ್ಕೆ ಅಳಿಯು ದೇವರು ಬಂದು
ಈಗಳಿಗೆ ಈಗಲೇ ತೊಳೆಯುವೆನು ಎಂದ !
ಮಗಳ ಮನ ನೊಂದೀತು, ಅತ್ತೆ ತಲೆಗೇ ಪಿತ್ತ !
ಜಗಳ ಬೇಡವೊ ಮಾವ, ಸಾಲ ಎತ್ತು !

ಥಡಿಯು ತಿನ್ನಲಿ ಬೂಂದಿ, ಮಗನಂತೆ ಅಲ್ಲವೆ ?
ಬಡಿಯುದಿರು ಜಂಬವನು, ನೀನು ತಿನ್ನು !
ದೀವಳಿಗೆ ಸೆವದಿಂದ ಒಬ್ಬಟ್ಟು ವಡೆ ಬೋಂಡ
ಹುಡುಗಾಟ ಚಟಪಟನೆ ಮುಗಿಸಿ ಬೇಗ
ಪಟ್ಟಕ್ಕೆ ಅವ ಬರಲಿ, ಇವ ಬರಲಿ ಪೀಠಕ್ಕೆ
ಹಬ್ಬದೂಟದ ರುಚಿಯು ತಗ್ಗದಿರಲಿ.

— ನಾ. ಕ.

ನೀವೂ ಮರೆತೀರೆಂದು....

ನಾನು, ರಾಜ, ಚಂದಿ ತಲಕಾಡು ಹಾದಿಯಲ್ಲಿ ಹೋದ ವರ್ಷ, ಕಲ್ಲೂರಿನ ಮಕ್ಕಳ ದಿನಾಚರಣೆಯಲ್ಲಿ ಭಾಗ ವಹಿಸಿದಮೇಲೆ, ನಮ್ಮ ಯಾತ್ರೆಯ ಬಗ್ಗೆ ವರದಿಯನ್ನು ನಿಲ್ಲಿಸಿದ್ದೆ. ಇಂದು ನಮ್ಮ ಯಾತ್ರೆಯ ಮೊದಲನೆಯ ಪುಣ್ಯ ತಿಥಿಯೆಂದೇ ಹೇಳಬಹುದು. ಇದರಿಂದ–ಅಂದರೆ ನಮ್ಮ ವರದಿಯನ್ನು ನಿಲ್ಲಿಸಿದ್ದರಿಂದ ನಿಮಗೆ ನೆಮ್ಮದಿ ಇದ್ದರೂ ಇರಬಹುದು. ನೀವು ಪ್ರಾಯಶಃ ಮೂವರ ಪಾಡೂ ಕಡೆಗೆ ಲೈಕಾ ಪಾಡೇ ಆಯಿತೆಂದು ಸಮಾಧಾನ ಪಟ್ಟಿರಬಹುದು. ಅಥವಾ–ಕಳೆದ ಯುದ್ಧದಲ್ಲಿ ಹಿಟ್ಲರ್ ಸ್ಟಾಲಿನ್‌ಗ್ರಾಡ್‌ವರೆವಿಗೂ ಬಂದು ಮಾಸ್ಕೋ ಮುಟ್ಟದೆ ಹಿಂತಿರುಗಿದ ಹಾಗೆ ನಾವೂ ಕಲ್ಲೂರಿಂದ ತಲಕಾಡು ಮುಟ್ಟದೆ ವಾಪಸಾದೆವೆಂದು ಊಹಿಸಿರಬಹುದು. ಅಥವಾ ಅಮೆರಿಕ ಚಂದ್ರನತ್ತ ಕಳುಹಿಸಿದ ರಾಕೆಟ್—ಹೋಗಲಿ ಬಿಡಿ. ನಾನಿಷ್ಟೇ ಹೇಳುವುದು—ನಮ್ಮ ಯಾತ್ರೆ ನಿಲ್ಲಿಸಿಲ್ಲ. ಕೆಲವು ಜನ ನಮ್ಮ ಯಾತ್ರೆಯ ಬಗ್ಗೆ ಗಮನವಿಟ್ಟದ್ದೂ ಸಹ ಉಂಟೆಂದು ನಮಗೆ ಬಂದಿರುವ ಪತ್ರಗಳಿಂದ ತಿಳಿದುಬಂದಿದೆ.

ಅಯ್ಯಾ ಯಾತ್ರಿಕರೇ—ನಿಮ್ಮ ತಲಕಾಡು ಯಾತ್ರೆ ಯಾವ ದಾರಿ ಹಿಡೀತು? ತಲಕಾಡು ಮರಳಿನಲ್ಲಿ ಅಡಗಿದ್ದೀರೋ—ಅಥವಾ ಈ ಜನ್ಮದಲ್ಲಿ.... ಇತ್ಯಾದಿ ಇತ್ಯಾದಿ.

"ಅಲ್ರೋ....ಗಳಿರಾ—ನೀವು ಯಾತ್ರೆ ಹೊರಟು ಏನು ಕಡಿದಿದ್ದೀರಿ? ನೀವು ಕಾಳಿಂಗನ ಮಡುವಿನಲ್ಲಿ ಮುಳುಗಿದಿರೋ ಅಥವಾ...." ಇತ್ಯಾದಿ ಇತ್ಯಾದಿ.

ಇಂತಹ ಇನ್ನೂ ೫-೬ ಪತ್ರಗಳು ಬಂದಿವೆ. ಅವುಗಳನ್ನು ಓದಿ, ನಮ್ಮ ಯಾತ್ರೆಯನ್ನು ಮುಂದಕ್ಕೆ ಅಜ್ಞಾತವಾಗಿ ಮುಗಿಸಿ, ಬಂದಮೇಲೆ "ತಲಕಾಡು ದರ್ಶನ" ಎಂಬ ಶಿರೋನಾಮೆಯಲ್ಲಿ ಹತ್ತು ಪರ್ವಗಳ ಒಂದು ಮಹಾ ಗ್ರಂಥವನ್ನೇ ದೇಶಕ್ಕೆ ನೀಡಬೇಕೆಂದು ನಿರ್ಧರಿಸಿದೆವು, ಆದರೆ ಮೊನ್ನೆ–ಅಂದರೆ ಒಂದು ವಾರಕ್ಕೆ ಹಿಂದೆ ಮತ್ತೊಂದು ಪತ್ರ ಬಂತು.

"ಅಯ್ಯಾ ಗೆಳೆಯರೇ—ನೀವು ಕಲ್ಲೂರು ಬಿಟ್ಟಮೇಲೆ ಎಲ್ಲಿ ಹಾಳಾಗಿ—ಕ್ಷಮಿಸಿ—ಎಲ್ಲಿ ಮಾಯವಾದಿರಿ? ನನಗೂ, ನನ್ನಾಕೆಗೂ, ನಮ್ಮ ತ್ರಿವಿಕ್ರಮನಿಗೂ

(ನನ್ನ ಚಿರಂಜೀವಿ) ಒಂದು ವಾದ ಹುಟ್ಟಿದೆ. ತ್ರಿವಿಕ್ರ ಹೇಳ್ತಾನೆ— ಆ ಕಲ್ಲೂರು ಮಕ್ಕಳು ನಿಮ್ಮ ಮೂರು ಸೈಕಲ್ಲುಗಳನ್ನೂ ಪುಡಿ ಮಾಡಿದ್ದರಿಂದ ನಿಮ್ಮ ಯಾತ್ರೆ ಅಲ್ಲಿಗೇ ಮುಗೀತೆಂದು. "ಖತಂ"— ಅನ್ನುತ್ತಾನೆ ನನ್ನಾಕೆ— ಹೋಗೀಂದ್ರೆ— ಎಲ್ಲೋ ಆ ಮೂವರನ್ನೂ ಅವರಾಕೆಗಳು ಹಿಡಿಸಿ ತರಿಸಿದ್ದಾರೆ— ಈಗ ಲಾಕೋಪಿ ನಲ್ಲೋ ಹುಚ್ಚಾಸ್ಪತ್ರೆಯಲ್ಲೋ ಇದ್ದಾರೆ— ಅಂತ ಹೇಳ್ತಾಳೆ. ನಾನು ಅದಕ್ಕೇನೂ ಹೇಳಿಲ್ಲ ಅಯ್ಯೋ ಪಾಪ— ಅಂದೆ. ನಿಜವಾಗಿ ನಿಮಗೇನು ಬಂತೆಂದು ನನಗೆ ಗೊತ್ತಿಲ್ಲ, ನನ್ನಾಕೆಯ ವಾದದಿಂದ ಪುರುಷರ ಸ್ವಾತಂತ್ರಕ್ಕೇ ಧಕ್ಕೆ ಬಂದಿರುವುದ ರಿಂದ ದಯವಿಟ್ಟು ನಿಮ್ಮ ಯಾತ್ರೆಯ ವರದಿಯನ್ನು ಮುಂದುವರಿಸಿ ನೀವೇನೂ ಸಂಕೋಚ ಪಡಬೇಡಿ. ಎಷ್ಟೋ ಬಾರಿ ನಾನು ಚಾಮರಾಜಪೇಟೆಯಿಂದ ಸಿಟಿ ಮಾರ್ಕೆಟ್ಟಿಗೆ ಬಿ. ಟಿ. ಸಿ. ಲಿ. ಬರಲು ನಿಮ್ಮ ತಲಕಾಡು ಯಾತ್ರೆಗಿಂತಲೂ ಜಾಸ್ತಿ ಕಾಲ ಹಿಡಿದಿದೆ. ಈ ಕಾಗದ ನಿಮಗೆ ಬರೆದು ಕೊರವಂಜಿ ಹೆಸರಿನಲ್ಲಿ ಪೆಟ್ಟಿಗೆಗೆ ಹಾಕಿದ್ದೇನೆ. ನಿಮಗೆ ತಲುಪಿದ್ದೇ ಆದರೆ ಪುನಃ ಮುಂದುವರಿಸುತ್ತೀರಾ— ಗೃಧ್ರಗಳಿರಾ...." ಇತ್ಯಾದಿ ಇತ್ಯಾದಿ.

ಹೀಗಾಗಿ— by what we may call public demand— ಈ ಪತ್ರಗಳನ್ನು ಮುಂದುವರಿಸಲು ನಾನು ರಾಜ, ಚಂದಿ ನಿರ್ಧರಿಸಿದ್ದೇವೆ. ಮುಂದಿನ ಊರು ಮುಟ್ಟುವುದರೊಳಗಾಗಿ—if the public demands us to stop— ನಾವು ಪತ್ರಗಳನ್ನು ಸ್ಟಾಪ್ಮಾಡುತ್ತೇವೆ. ನಮ್ಮ ಮುಂದಿನ ಸ್ಥಳ ಕೊರವಂಜಿ ಕಾಯುವ ಪರಂಜಿಗೆ ಗೊತ್ತು. ಮುಂದೆ ಓದಿ—

ನಾವು ಕಲ್ಲೂರು ಬಿಟ್ಟು ಮಾದೇನಳ್ಳಿ ಸೇರಿದೆವು— ಅಲ್ಲಿ ನಮಗೆ ಒಂದು ಹೊಸ ಅನುಭವವಾಯ್ತು. ಮಾದೇನಳ್ಳಿಯ ಬಸ್ ಸ್ಟಾಂಡ್ ಮುಟ್ಟುತ್ತಲೇ ನಮ್ಮ ವಾಹನಗಳನ್ನು ಯಾರೋ ಅಡ್ಡ ಹಾಕಿ ನಿಲ್ಲಿಸಿ ನಮ್ಮನ್ನು ಕೆಳಗಿಳಿಸಿದರು. ರಾಜ ಚಂದಿಗಿಂತ ನಾನು ತುಸ ಹಿಂದಿದ್ದರಿಂದ— ನಾನು ತುಸ ಸುಧಾರಿಸಿಕೊಳ್ಳುವುದರೊಳ ಗಾಗಿ ವಾಹನದಿಂದ ಇಳಿಸಿದವರು ನನ್ನ ಸ್ನೇಹಿತರನ್ನು ಎಳೆದುಕೊಂಡು ಹೋಗಿ ಅಲ್ಲಿದ್ದ ಮರದಡಿ ನಿಂತಿದ್ದ ಒಬ್ಬರಿಗೆ ಒಪ್ಪಿಸಿದರು. ಮರುಕ್ಷಣ ನನ್ನ ಸ್ನೇಹಿತರು— ಒಬ್ಬನಾದ ಮೇಲೊಬ್ಬ— ಅಯ್ಯೋ ಥತ್ ! ಅಂತ ಕಿರುಚಿದರು. ಮರುಕ್ಷಣ ಇಬ್ಬರೂ ತಮ್ಮ ತಮ್ಮ ಎಡ ತೋಳುಗಳನ್ನು ಬಲ ಅಂಗೈಗಳಿಂದ ಉಜ್ಜುತ್ತ ಬಂದರು. ಮರುಕ್ಷಣ— ನನಗೂ ಅದೇ ಅನುಭವವಾಯ್ತು— ಮಾದೇನಳ್ಳಿ ಡಾಕ್ಟರಿಂದ ಇನಾಕ್ಯುಲೇಷನ್ ! ಅಲ್ಲಿ ನಾವು ನಿಂತಿರುವಾಗಲೆ ಇನ್ನೂ ಇನ್ನೂ 50–60 ಜನಕ್ಕೆ ಇದೇ ಪ್ರಾಯಶ್ಚಿತ್ತವಾಯ್ತು. ತುಸ ಹೊತ್ತು ಕಳೆದ ಮೇಲೆ ನಮ್ಮ ನೋವು ಕಡಿಮೆಯಾಯ್ತು. ವಿಷಯವೂ ತಿಳಿಯಿತು. ಮಾದೇನಳ್ಳಿ ಸುತ್ತಮುತ್ತಲೂ ಕಾಲರಾ ಹಬ್ಬಿದೆಯೆಂದೂ ಆಗಾಗಲೇ ನೂರಾರು ಜನಕ್ಕೆ ತಗುಲಿ

ಹತ್ತಾರು ಜನ ಖಾಲಿಯಾದರೆಂದೂ ತಿಳಿಯಿತು. ಇದನ್ನು ಕೇಳಿ ನಮಗೆ ಆ ವೈದ್ಯರ ಮೇಲಿದ್ದ ರೋಷ ಕಡಿಮೆಯಾಯ್ತು. ನಾನು ಇದುವರೆವಿಗೂ ಕಾಲರಾ ಅಂದರೆ—ಸೌದೆ; ಬೆಂಕಿ, ಸನಿಕೆ, ಗುದ್ದಲಿ—ಇವುಗಳ ಓಡಾಟವೆಂದು ಮಾತ್ರ ತಿಳಿದಿದ್ದೆ. ಆದರೆ— ಈಗ ನನಗೂ ಕಾಲರಾಕ್ಕೂ ಭೇಟಿಯಾದಂತಾಯ್ತು. ನನಗೆ ಅರಿವಿಲ್ಲದೆಯೇ ದಾರಿಯಲ್ಲಿ ಹೋಗುತ್ತಿದ್ದವರನ್ನು ವೈದ್ಯರತ್ತ ಎಳೆದುಕೊಂಡು ಹೋಗಿ ಚುಚ್ಚಿಸಲು ಶುರುಮಾಡಿದ್ದೆ. ರಾಜ ಚಂದಿ ಇಬ್ಬರೂ ಪೈಪೋಟಿಯಮೇಲೆ ಜನರನ್ನು ಎಳೆದಾಡಿದರು. ಎಷ್ಟೋ ಬಾರಿ ಚುಚ್ಚಿಸಿಕೊಂಡವರನ್ನೇ ಪುನಃ ಎಳೆದು ತಂದೆವು ಇದರಿಂದ ಸ್ವಲ್ಪ ಜಗಳವೂ ಆಯಿತೆನ್ನಬಹುದು. ಆದರೂ—ಒಟ್ಟಿನಲ್ಲಿ ನಾವೆಲ್ಲಾ ಹುಮ್ಮಸ್ಸಿನಿಂದ ಕೆಲಸ ಮಾಡಿ ಎರಡು ಗಂಟೆಗಳ ಕಾಲದಲ್ಲಿ 300 ಜನಕ್ಕೆ ಹೆಚ್ಚಾಗಿ ಚುಚ್ಚಿಸಿದೆವು. ಕಡೆಯಲ್ಲಿ ಆ ಮರದಡಿ ಉಳಿದವರು—ಡಾಕ್ಟರು, ನಾನು ರಾಜ ಚಂದಿ ಮತ್ತು ಡಾಕ್ಟರ ಎರಡು ಜನ.

"ಬಹಳ ಥ್ಯಾಂಕ್ಸ್ ನಿಮ್ಮಿಂದ ಬಹಳ ಉಪಕಾರವಾಯಿತ್ತು" ಅಂದರು ಡಾಕ್ಟರು.

"ಛೆ ಬಿಡಿ ಸಾರ್" ಅಂದ ಚಂದಿ :

"ನೀವು ಈ ಊರಿಗೆ ಹೊಸಬರಾಗಿದ್ದೀರಿ....

ನಮ್ಮ ಪರಿಚಯ ಮಾಡಿಕೊಟ್ಟೆ. ಡಾಕ್ಟರು ಆ ಊರಿನ ಹೋಟೆಲಿಗೆ ಹೋಗಲು ನಮ್ಮನ್ನು ಬಿಡಲಿಲ್ಲ ಕಾಲರಾ ಇರುವಾಗ ಹೋಟೆಲಿಗೆ ಹೋಗುವುದು ಅಪಾಯವೆಂದರು. ತಮ್ಮ ಮನೆಗೇ ಎಳೆದುಕೊಂಡು ಹೋದರು. ಅದೂ ಇದೂ ಮಾತನಾಡುತ್ತ ನಾವು ಡಾಕ್ಟರ್ ಮಾಧವಿನ ಸ್ನೇಹಿತರೆಂದ ಮೇಲೆ ಅವರಿಗೆ ನಮ್ಮ ಮೇಲೆ ಮತ್ತೂ ಅಭಿಮಾನ ಬಂತು. ಈ ಡಾಕ್ಟರೂ-ಮಾಧು-ಇಬ್ಬರೂ ಒಟ್ಟಿಗೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿದ್ದರಂತೆ.

ಡಾಕ್ಟರು—ಅವರ ಹೆಸರು ನಾನು ಕೇಳಲಿಲ್ಲ— ನನ್ನ ಸ್ನೇಹಿತರೂ ಕೇಳಲಿಲ್ಲ— ನಮಗೆ ಕಾಲರಾ ವಿಷಯ ಸಾಕಷ್ಟು ಹೇಳಿದರು. ಕಾಲರಾ ಒಂದು ಸಣ್ಣ— ಅಂದರೆ ಅತೀ ಸಣ್ಣ—ನಮಗೆ ಊಹಿಸಕೊಳ್ಳಬಹುದಾದಕ್ಕಿಂತಲೂ ಸಣ್ಣ ಕ್ರಿಮಿಯಿಂದ ಬರುತ್ತಂತೆ ಹಾಳು ನೊಣಗಳ ಹಾವಳಿಯಿಂದ ಆಹಾರದ ಮೂಲಕ ಹರಡುತ್ತಂತೆ! ಇದನ್ನು ಕೇಳಿ ನನಗೆ ವಿಪರೀತ ಅವಮಾನವಾಯ್ತು. ಕೇವಲ ಈ ಸಣ್ಣ ಕ್ರಿಮಿ ಮನುಷ್ಯನನ್ನು ನಾಶಮಾಡುವುದಿದ್ದರೆ—ಇನ್ನು ನಾವು ಏಕಾಗಿ ಹೆಮ್ಮೆಪಡಬೇಕೆನ್ನಿಸಿತು! ನನ್ನ ಮುಖ ಕೆಳಗಿಳಿಯಿತು. ನನ್ನ ಸ್ನೇಹಿತರ ಮುಖಗಳೂ ಸಪ್ಪೆಯಾದವು. ನಮ್ಮ ಮನಸ್ಸನ್ನು ತಿಳಿದೋ ಏನೋ ಡಾಕ್ಟರು— ಈ ಇನಾಕ್ಯುಲೇಷನ್ ಮತ್ತು ಇತರ ಜಾಗರೂಕತೆಗಳಿಂದ ಕಾಲರಾ ಹತೋಟಿಗೆ

ತೆರಬಹುದು ಎಂದರು. ಮತ್ತು ನಮಗೆ ಬೇರೆ ಕೆಲಸವಿಲ್ಲದಿದ್ದರೆ ಅವರ ಜೊತೆಯಲ್ಲಿ ಮಧ್ಯಾಹ್ನ ಒಂದು ಹಳ್ಳಿಗೆ ಹೋಗಬಹುದು ಎಂದರು.

ಮಧ್ಯಾಹ್ನ ಊಟವಾದ ನಂತರ ನಾನು ರಾಜ ಚಂದಿ ಆ ಡಾಕ್ಟರ ಜೊತೆಯಲ್ಲಿ ಹನುಮನಳ್ಳಿಗೆ ಹೊರಟೆವು. ನಮ್ಮ ಜೊತೆಗೆ ಹೆಲ್ತ್ ಇನ್ಸ್‌ಪೆಕ್ಟರಿಬ್ಬರು, ಒಬ್ಬ ಜವಾನ—ಇದ್ದರು. ಡಾಕ್ಟರು ಚುಚ್ಚುವುದಕ್ಕೂ, ಹೆಲ್ತ್ ಇನ್ಸ್‌ಪೆಕ್ಟರು—ಬಷೀರ್ ಅವರ ಹೆಸರು—ಭಾವಿಗಳಿಗೆ ಔಷಧಿ ಹಾಕುವುದಕ್ಕೂ ಅಣಿಮಾಡಿ ಕೊಂಡಿದ್ದರು. ಹನುಮನಳ್ಳಿ ಸೇರಿದಮೇಲೆ ಊರಿನ ಪಟೇಲರ ಸಹಾಯದಿಂದ ಡಾಕ್ಟರು ಇನಾಕ್ಯುಲೇಷನ್ ಶುರುಮಾಡಿದರು. ನಾನು–ಚಂದಿ ಬಷೀರ್ ಅವರ ಜೊತೆಯಲ್ಲಿ ಭಾವಿಗಳನ್ನು ಹುಡುಕುತ್ತ ಹೊರಟೆವು. ಹನುಮನ ಹಳ್ಳಿಯಲ್ಲಿ ಭಾವಿಗಳಿಲ್ಲ. ಊರಿಗೆ ಒಂದೂವರೆ ಫರ್ಲಾಂಗು ದೂರದಲ್ಲಿರುವ ಹಳ್ಳದಿಂದ ನೀರು ಸರಬರಾಜು. ಇವನ್ನು ಕೇಳಿ ಬಷೀರ್ ಅವರಿಗೆ ರೇಗಿತು.

"ಇದೇನ್ರೀ ಅನ್ಯಾಯ—ಈ ಹಳ್ಳೀಲಿ ಒಂದು ಹಾಳು ಭಾವೀಗೆ ಗತಿ ಇಲ್ಲ!" ಅಂತ ಕೂಗಾಡಿದರು.

"ಹಾಳು ಭಾವಿ ಇವೆ ಸಾರ್ ನೀರಿಲ್ಲ. ಅರ್ಜಿ ಕೊಟ್ಟಿದ್ದೇವೆ—ಬೇರೆ ಭಾವಿ—ಪರಿಶೀಲನೆಯಲ್ಲಿದೆ ಸಾರ್." ಅಂದರು ಊರಿನ ಜನ.

"ನೋಡಿ ಸಾರ್—ಈ ಹಾಳು ಪುಡೀನ – ಹತ್ತು ಪೌಂಡು ಸಾರ್—ಎತ್ತಿ ಸಾರ್!—ಇಷ್ಟು ದೂರ—ನನ್ನ ಮಗುನಕೂಡ ಇಷ್ಟುದೂರ ನಾನು ಇಷ್ಟು ಮುತುವರ್ಜಿಯಿಂದ ಎತ್ತಿದ್ದಿಲ್ಲ ಸಾರ್—ಹೊತ್ತುಕೊಂಡು ಬಂದಿದ್ದೇನೆ—ಈ ಊರಲ್ಲಿ ಒಂದು ಭಾವಿ ಗತಿ ಇಲ್ಲಾಂದ್ರೆ ಹೊಟ್ಟೆ ಉರಿಯುಲ್ವೆ ಸಾರ್? ಅಂತ ನಮ್ಮ ಕಡೆ ತಿರುಗಿ ಗೋಳಿಟ್ಟರು—ಬಷೀರ್. ನನಗೆ ಚಂದಿಗೆ ಅವರ ಮೇಲೆ ಎಷ್ಟೋ ಕರುಣೆ ತೋರಿದರೂ ತಕ್ಷಣ ಒಂದು ಭಾವಿಯನ್ನು ನಿರ್ಮಾಣ ಮಾಡಲು ನನ್ನಿಂದ—ಕಡೆಗೆ ಚಂದಿಯಿಂದಕೂಡ ಸಾಧ್ಯವಾಗಲಿಲ್ಲ. ಕಡೆಗೆ ಡಾಕ್ಟರು ನಾನು ಸೇರಿ ಬಷೀರ್ ಅವರನ್ನ ಸಮಾಧಾನ ಮಾಡಿದೆವು.

ನಾವು ಮಾದೇನಳ್ಳಿಗೆ ಸಾಯಂಕಾಲ ೭ ಘಂಟೆಗೆ ವಾಪಸಾದೆವು. ಡಾಕ್ಟರ ಪ್ರೇರಣೆಯಮೇಲೆ ಅಂದು ಅಲ್ಲೇ ಉಳಿದೆವು. ರಾತ್ರಿ ಊಟವಾದ ನಂತರ ನಮ್ಮ ಹರಟೆ ಶುರುವಾಯ್ತು. ನನಗಂತು ಮನಸ್ಸು ಬಹಳ ನೆಮ್ಮದಿಯಿಂದಿತ್ತು. ಈ ಸನ್ನಿವೇಶ ಕೇವಲ ಸಮಾಜ ಸೇವೆ—ಕಿಂಚಿತ್ತಾದರೂ ರಾಜಕೀಯ ವಿಲ್ಲ ನಿಜವಾಗಿ ಅವತ್ತಿನ ಕಾರ್ಯ ನೋಡಿ—ವೈದ್ಯರು ಮತ್ತು ಅವರ ಸಿಬ್ಬಂದಿಯ ಕಸರತ್ತು—ಜನರ ಸಹಕಾರ ನೋಡಿ ನನಗೆ ಒಂದು ತರಹ ಹೆಮ್ಮೆ ಬಂತು. ಅದನ್ನು ಸಭೆಯಲ್ಲಿ ಸೂಚಿಸಿದೆ ಅದಕ್ಕೆ ಡಾಕ್ಟರಂದರು.

"ನೀವು ಹೇಳೋದೇನೋ ಸರಿ. ಈಗೀಗ ನಮ್ಮ ಜನರಿಗೆ ಎಷ್ಟೋ ಜ್ಞಾನ ಬಂದಿದೆ. ದೈವ ಭಕ್ತಿಯ ಜೊತೆಗೆ ಮನುಷ್ಯ ಪ್ರಯತ್ನದಲ್ಲಿ ಗೌರವಹುಟ್ಟಿದೆ. ಆದರೆ ಎಲ್ಲ ವಿಷಯದಲ್ಲೂ ಇರುವಹಾಗೆ ಇಂತಹ ಸಮಯದಲ್ಲೂ ತುಸ ಕೊರತೆ ಇದ್ದೇ ಇದೆ ..."

"ಆಂದ್ರೆ—ಇಂತಹ ವಿಚಾರದಲ್ಲಿ ರಾಜಕೀಯ... "

"ರಾಜಕೀಯವೆನ್ನುವಷ್ಟು ರಾದ್ಧಾಂತವಲ್ಲ. ಈಗ ನೋಡಿ—ಈ ಸಾಂಕ್ರಾಮಿಕ ರೋಗಗಳು ಹರಡದ ಹಾಗೆ—ಹೋಟೆಲುಗಳನ್ನೂ ಸಂತೆ ಮಾರುಕಟ್ಟೆಗಳನ್ನು ಮುಚ್ಚಿಸುವುದು ನಮ್ಮ ಕರ್ತವ್ಯ. ಅಂತಹ ಸಮಯದಲ್ಲಿ ಹೋಟೇಲಿನ ಜನ ಮುಚ್ಚಿದ ಬಾಗಿಲಿನ ಒಳಗಿಂದ ಊಟ ಉಪಚಾರ ನಡೆಸೇ ನಡೆಸುತ್ತಾರೆ ಇಲ್ಲದಿದ್ದರೆ ಪ್ರಯಾಣಿಕರಿಗೆ ಮತ್ತು ಖಾಯಂ ಗಿರಾಕಿಗಳಗೆ ತೊಂದರೆ. ಅದಕ್ಕೆ ನಿವಾರಣೆ ನಮ್ಮಲ್ಲಿಲ್ಲ. ಸಂತೆ ವಿಚಾರ—ಸಂತೆ ಮುಚ್ಚಿದ್ದರಿಂದ ಊರಿನ ಕೆಲವು ವ್ಯಾಪಾರಸ್ತರಿಗೆ ಎಷ್ಟೋ ಅನುಕೂಲವಾಗಿ ಅವರು ಈ ಸಮಯವನ್ನು ದುರುಪಯೋಗ ಮಾಡಿಕೊಳ್ಳುತ್ತಾರೆ. ಒಂದು ವಿಧವಾದ "ತುರುತು ವಾತಾವರಣ" ಕಲ್ಪಿಸಿ ಹಳ್ಳಿಯವರಿಂದ ದಂಡ ವಸೂಲು ಮಾಡುತ್ತಾರೆ. ಕಾಲರಾ ಹೆದರಿಕೆ ಕಮ್ಮಿಯಾದ ಮೇಲೆ ಕೂಡ—ಅಧಿಕಾರಿಗಳು ಪುನಃ ಸಂತೆಗೆ ಅನುಮತಿ ಕೊಡಲು ಅನುಮಾನಿಸುವ ರೀತಿಯಲ್ಲಿ—ಕಾಲರಾ ಪುನಃ ಅಲ್ಲಲ್ಲಿ ತಲೆಯೆತ್ತುತ್ತಿದೆ—ಅಂತ ಪುಕಾರು ಹುಟ್ಟಿಸುವುದಕ್ಕೂ ಹೇಸುವುದಿಲ್ಲ. ಈ ಸಣ್ಣ ವಿಷಯಗಳಿಂದ ನಮಗೆ ತುಸ ಬೇಜಾರು ಆಗುತ್ತೆ—ಅಷ್ಟೆ" ಅಂದರು.

ರಾಜನಿಗೆ ಕುಳಿತಿದ್ದ ಕುರ್ಚಿಯಲ್ಲೇ ನಿದ್ರೆ ಬಂದಿತ್ತು. ಅವನನ್ನು ಎಬ್ಬಿಸಿ ಡಾಕ್ಟರ ಮನೆಯ ವರಾಂಡದಲ್ಲಿ ಎಲ್ಲರೂ ಮಲಗಿದೆವು.

—"ಕೇಫ"

ಹಿಂದೆ ಕೇಳಿದ್ದರೆ—ಕ್ಷಮಿಸಿ

"ಏನಂತೆ—ವಿಪರೀತ ಕೆಲಸವಿದೆ ಅಂತ ಆಫೀಸಿನಿಂದ ಕಂತೆ ಕಂತೆ ಕಾಗದ ತಂದು ಮುಂದೆ ಹೇರಿಕೊಂಡು ಹೀಗೆ ಒಂದೇ ಸಮನೆ ಕುಡೀತಿದ್ದೀರಿ—ಇದರಿಂದ ಕೆಲಸ ಮುಗಿಯುತ್ಯೆ ?"

"ಮುಗಿಯೊಲ್ಲಾ ಗೊತ್ತು ಕಣೇ—ಆದರೆ ಕುಡೀತಾ ಇದ್ರೆ—ಕೆಲಸವಿದ್ರೆ ಹಾಗೇ ಬಿದ್ದಿರ್ಲಿ—ಕತ್ತೆ ಬಾಲ! ಅನ್ನೋ ಹಾಗ ಸಮಾಧಾನ ಬರುತ್ಯೆ!"

ಪೃಥ್ವೀರಾಜ್ ಕಪೂರರ ಗಮನಕ್ಕೆ

ನಮ್ಮೂರಿಗೆ ಮೊನ್ನೆ ಮೊನ್ನೆ ಸಂಗೀತ ಸಾಹಿತ್ಯ ಕಲೆ ವೇದಾಂತ ಇವೆಲ್ಲ ಒಟ್ಟೊಟ್ಟಿಗೆ ಧಾಳಿಯಿಟ್ಟಿದ್ದವು. ಸ್ವಾಮಿಾಜಿಗಳ ಭಾಷಣ ಕೇಳೋದೇ, ಗವಯಿಗಳ ಸಂಗೀತ ಕೇಳೋದೇ, ಸಿನಿಮವೇ, ಚಿತ್ರ ಪ್ರದರ್ಶನವೇ, ಯಾವುದು ಎತ್ತ ಎಂದು ತಿಳಿಯದೆ ಜನ ಪರಿದಾಡಿದ್ದೇ ಪರಿದಾಡಿದ್ದು. ನಡು ನಡುವೆ ಹೋಟಲುಗಳಿಗೆ ನುಗ್ಗಿದ್ದೇ ನುಗ್ಗಿದ್ದು. ಸಾಲದ್ದಕ್ಕೆ ಪೃಥ್ವೀ ಥಿಯೇಟರ್ಸ್‌ನವರು ಬೇರೆ ಬಂದಿಳಿದು ತಮ್ಮ ನಾಟಕ ಆಡಲಾರಂಭಿಸಿದರು. 'ಪಠಾನ್' ಅವರ ವೈಶಿಷ್ಟವೆಂದು ಎಲ್ಲರೂ ಒಬ್ಬರಿಗೊಬ್ಬರು ಹೇಳಿಕೊಂಡಿದ್ದರಿಂದ ನಾಟಕ ಶಾಲೆ ಕಿಕ್ಕಿರಿದುಬಿಟ್ಟಿತ್ತು, ಐದು ರೂ. ಕೊಟ್ಟು ಅರ್ಧ ಕುರ್ಚಿಯನ್ನು ನನ್ನದನ್ನಾಗಿ ಮಾಡಿಕೊಂಡು ನಾನೂ ನಾಟಕ ನೋಡಿದೆ. ನೋಡಿದಮೇಲೆ ನಾಟಕದಲ್ಲಿರುವ ಕೆಲವಾದರೂ ಐಬುಗಳನ್ನು ಎತ್ತಿ ತೋರಿಸಬೇಕೆನ್ನಿಸಿತು. ಇದೇನು ನನ್ನೊಬ್ಬನ ಅಭಿಪ್ರಾಯವಲ್ಲ. ನಮ್ಮ ಕಡೆಯ ನಾಟಕಗಳನ್ನು ತಪ್ಪದೆ ನೋಡಿ ಒಂದು ವಿಶಿಷ್ಟ ಅಭಿರುಚಿಯನ್ನು ಬೆಳೆಸಿಕೊಂಡು ಬಂದ ಮಹನೀಯರೆಲ್ಲ ಹೀಗೆನ್ನುತ್ತಾರೆ.

1. ನಮ್ಮ ಕಡೆಯ ಅಮೆಚೂರ್ ಕಂಪೆನಿಗಳೂ ಶಾಲಾ ಕಾಲೇಜುಗಳೂ ಕೂಡ ಪರದೆ ಸೀನ್, ಸೀನರಿಗಳಿಗೆ ಸಾಕಷ್ಟು ವೆಚ್ಚ ಮಾಡುವಾಗ ಪೃಥ್ವಿಯವರು ನಾಟಕದುದ್ದಕ್ಕೂ ಒಂದೇ ಒಂದು ಮಾಸಲು ಸೀನ್ ತಗುಲಿಸಿಟ್ಟಿದ್ದು ಅಕ್ಷಮ್ಯ. ಹಾಗೆಯೇ ಮಾಸಲದ ಅಂಕದ ಪರದೆಯಲ್ಲಿ ದೊಡ್ಡದೊಂದು ತೂತಿದ್ದುದು ಕೂಡ ಶೋಚನೀಯ. ನಾಟಕಗಳ 'ಖಲರ್' ರೈಸ್ ಇರುವುದೆಲ್ಲ ಸೀನ್ ಸೀನರಿ ಪಟಾಸು ಫರದೆಗಳಲ್ಲಿ ಎಂದು ಪೃಥ್ವೀರಾಜ್ ಕಪೂರರಿಗೆ ಗೊತ್ತಿಲ್ಲವೇ ?

2. ತಾರಾಚಂದ್ ತೀರಿಕೊಂಡಾಗಲೂ ಅನಂತರ ಒಹದೂರ್ ಖಾನನ್ನು ಗುಂಡು ಹೊಡೆದು ಕೊಂದಾಗಲೂ ದಾರುಣವಾದ ವ್ಯಥೆಯಿಂದ ಅವರ ಮಾತಾ ಪತ್ನಿಯರುಗೋಳಿಡುವಾಗ ಒಂದೇ ಒಂದು ದುಃಖದ ಹಾಡು ಅವರ ಬಾಯಿಂದ ಹೊರಡದಿರುವುದು ಆಶ್ಚರ್ಯಕರ! ಸಭಿಕರು ಇದರಿಂದ ತೀರ ನಿರಾಸೆಗೊಳ್ಳಬೇಕಾಯಿತು.

3. ಪಾತ್ರಧಾರಿಗಳ ಉಡುಗೆ ತೊಡಿಗೆಯ ಕುರಿತು ಕೂಡ ಕಂಪೆನಿಯವರು ಕೃಪಣತೆ ತೋರಿಸಿದಾರೆ. ನಮ್ಮ ಹಳ್ಳಿ ಪಳ್ಳಿಗಳ ಕಂಪೆನಿಗಳೂ ಕೂಡ ಜರಿ

ಜರತಾರಿಗಳನ್ನು ಪೇರಿಸಿಕೊಂಡು ಮನಮೋಹನ ಪಾತ್ರಗಳನ್ನು ಇಸ್ಟೇಜಿಗೆ ಕಳಿಸುತಿರುವಾಗ ಪೃಥ್ವಿಯವರು ಮಾಸಲು ಅಂಗಿ ಪಂಗಿ ತೊಡಿಸಿರುವುದು ನಾಚಿಕೆಗೇಡು. ಕೊನೇ ಪಕ್ಷ ಹೆಮ್ಮಕಳಿಗಾದರೂ ಕಿಂಗಾಪಿನ ಬಟ್ಟೆಬರೆ ತೊಡಿಸಬೇಕೆಂದು ತೋಚಲಿಲ್ಲವೆ ?

4. ನಾಟಕದಲ್ಲಿ ಹಲವು ಸಲ ಹೋರಾಟದ ಪ್ರಸಂಗ ಬರುತ್ತದೆ. ಆಗಲೆಲ್ಲ ಪೃಥ್ವಿಯವರು ಹೋರಾಟ ನಡೆದ ಭಾವನೆ ಉಂಟು ಮಾಡುತ್ತಾರೆಯೇ ವಿನಾ ಪ್ರತ್ಯಕ್ಷ ಏನೂ ತೋರಿಸುವುದಿಲ್ಲ. ಹೊರಗಡೆ ಢಂ ಢಂ ಶಬ್ದ ಕೇಳಿಸಿದರೆ ಸಾಕೆ ? ಅದರ ಬದಲಿಗೆ ಒಂದೊಂದು ತಳವಾರು ಕೊಟ್ಟು ಪ್ರತ್ಯಕ್ಷ ಕತ್ತಿ ಕಾಳಗ ತೋರಿಸಿದ್ದರೆ ಎಷ್ಟೋ ರೋಮಾಂಚಕಾರಕವಾಗುತ್ತಿತ್ತು.

5. ನಾಟಕದಲ್ಲಿ ಹಾಸ್ಯ ಸಾಕಷ್ಟರಲಿಲ್ಲ. ಹೊಟ್ಟೆ ಹುಣ್ಣಾಗುವಂತೆ ನಗಲು ಸಂದರ್ಭವೇ ಸಿಗಲಿಲ್ಲ. ಸ್ಟೇಜಿನ ಮೇಲೆ ಯಾವ ಪಾತ್ರವೇ ಇರಲಿ ಹಾಸ್ಯಗಾರನಂತೂ ಹತ್ತಿರದಲ್ಲೇ ಒಂದೆಡೆ ಇದ್ದು ಸಭಿಕರನ್ನು ನಗಿಸುತ್ತಿರಬೇಕೆಂಬ ತತ್ವ ಪೃಥ್ವಿಯವರಿಗೆ ತಿಳಿಯದೆ?

6. ಕೊನೆಯದಾಗಿ ನಾಟಕದ ಕೊನೆ. ಅದನ್ನು ದುರಂತವಾಗಿ ಮಾಡುವ ಅಗತ್ಯವೇನಿತ್ತು ? ಬಹದೂರ್ ಖಾನನ್ನು ಬಿಡುಗಡೆ ಮಾಡಿದರೆಂದು ತೋರಿಸಿ ಆತ ಹಿಂದಿರುಗಿ ಬಂದು ತನ್ನ ನವ ವಧುವಿನೊಡನೆ ಬಂದು ಉದ್ಯಾನದಲ್ಲಿ ನಲಿಯುವುದನ್ನು ತೋರಿಸುವ ದೃಶ್ಯದೊಡನೆ ನಾಟಕವನ್ನು ಮುಕ್ತಾಯ ಮಾಡಬಹುದಿತ್ತು.

ಈ ಪಟ್ಟಿಯನ್ನು ಮುಂದೆ ಬೆಳೆಸಲು ನಮಗಿಷ್ಟವಿಲ್ಲ. ಇಷ್ಟರಿಂದಲೇ ಪೃಥ್ವಿಯವರು ನಮ್ಮ ಅಭಿರುಚಿಗೆ ಸರಿಯಾಗಿ ವರ್ತಿಸುವುದನ್ನು ಕಲಿತುಕೊಳ್ಳಬಹುದು.

ರಾ. ಮಿ.

ವೈದ್ಯರಲ್ಲಿ ವಿಷನಿಮಿಷಗಳು

ಡಾಕ್ಟ್ರೆ !—ಈ ಸಾರಿ ನಮ್ಮಮ್ಮನ ತಲೆನೋವು ವಾಸಿಯಾದದಕ್ಕೆ ನಿಮಗೆ ದುಡ್ಡು ಬಂದರೆ, ನಂಗರ್ಧ ಕೊಡಬೇಕು—ನಮ್ಮಮ್ಮನ ತಲೆನೋವಿಗೆ ನಾನೆ ಕಾರಣ ಡಾಕ್ಟ್ರೇ ! ”

ಬಾಲಭಾದೆ

(—ಬಲಿತವರಿಗೆ—)

ಪಾಠ ೧೩

"ಲೇಖ-ಕರು"

ನಮ್ಮ ಭಾರತದಲ್ಲಿ ಲೇಖ-ಕರಿಗೆ ಬಹಳ ಮರ್ಯಾದೆ. ಸಂ-ಸ್ಕೃತಿಯ ದೀವ-ಟಿಗೆ ಗಳು ಅವರು. ಸಭೆ-ಗಳಲ್ಲಿ, ಸಂತೆ-ಗಳಲ್ಲಿ ಅವರನ್ನು ಹೊಗಳು-ತ್ತಾರೆ. ಆದರೆ ಹೊಗಳಿಸಿ-ಕೊಳ್ಳಬೇಕಾದರೆ ಅವರು ಸತ್ತಿರ-ಬೇಕು. ಪೂರ್ಣವಾಗಿ ಸತ್ತೇ ಹೋಗಿರ-ಬೇಕು ಅರ್ಧ ಅರ್ಧ ಸತ್ತು ಅರ್ಧ ಅರ್ಧ ಬದುಕಿ-ದ್ದರೆ ಜನರು ಹೊಗಳು -ವುದಿಲ್ಲ. ಏಕೆ ಅಂದರೆ ಅಂತಹ ಲೇಖ=ಕರು ಇದ್ದುದನ್ನು ಇದ್ದ ಹಾಗೆಯೇ ಒರಟು ಒರಟಾಗಿ ಹೇಳೇ ಬಿಡುತ್ತಾರೆ. ಒರಟು ತನ ಸಂಸ್ಕೃತಿಯ ಲಕ್ಷಣವಲ್ಲ. ಆಂದರೆ ಅಂತಹ ಲೇಖ-ಕರು ಸುಸಂ-ಸ್ಕೃತರಲ್ಲ. ಅದಕ್ಕೇ ಹೊಗಳು-ವಿಕೆ ಇಲ್ಲ.

ಲೇಖ-ಕರು ಬಾಳಬೇಕಾದರೆ ದೇಶ ಬಿಟ್ಟು ಬೇರೆ ದೇಶಕ್ಕೆ ಹೋಗ-ಬೇಕು. ಅಲ್ಲಿ ಅವ-ರಿಗೆ ಸನ್ಮಾನ ಜಾಸ್ತಿ. ಆಗ ಭಾರ-ತಕ್ಕೆ ಹಿಂತಿರುಗಿದರೆ ಹಾರ ತುರಾಯಿ ತೆಂಗಿನಕಾಯಿ ಕೊಟ್ಟು ಮರ್ಯಾದೆ ಮಾಡು-ತ್ತಾರೆ. ಅಧ್ಯಕ್ಷ-ರಿಗೆ ಖುಷಿ-ಯಾದರೆ ವರ್ಷಂ-ಪ್ರತಿ ಪಿಂಚಣಿ ಕೊಡು-ತ್ತಾರೆ. ಕೆಲವು ವೇಳೆ ನೂರು ರೂಪಾಯಿ-ಗಳಷ್ಟನ್ನೂ ಕೊಡು-ವುದುಂಟು. ಅದ-ರಲ್ಲಿ ಲೇಖ-ಕನು ತನ್ನ ದೊಡ್ಡ ಸಂ-ಸಾರ ವನ್ನು ನಿಭಾ-ಯಿಸಬೇಕು. ಕಾಗದ ಮಸಿ ಎಲ್ಲವನ್ನೂ ಕೊಳ್ಳ-ಬೇಕು.

ನಮ್ಮ ಪ್ರ-ಧಾನಿಗಳು ಹೆಸ-ರಾಂತ ಲೇಖ-ಕರು. ಅವರು ಲೇಖನ ಪುಸ್ತಕಗ ಳಿಂದ ಸುಮಾರು ಹಣ ಸಂಪಾದಿಸುತ್ತಾರೆ ಎಂದು ವದಂತಿ. ಲೇಖ-ಕರ ಬಾಳನ್ನು ಅವರು ಉತ್ತಮ ಪಡಿಸುತ್ತಾರೆ. ಲೇಖ-ಕರು ಲೋಕ-ಸಭೆಯ ಸದಸ್ಯರಾದರೆ ಪ್ರಧಾನಿಗಳು ಸಹಾಯ ಮಾಡಲು ಸುಲಭ.

ಹೇಳಿ ಬರೆಯಿಸಿ—	ಲೇಖಕ	ಬಾಳು	ಸಾವು
	ಪರ ದೇಶ	ಸನ್ಮಾನ	ಪಿಂಚಿಣ್

* * *

ಮಾ ಸ್ತ ರು

ಅದು ಯಾರು ಬಲ್ಲೆಯಾ ಮಗು ! ಆಕೋ ಅಲ್ಲಿ ಮಗದಡಿ ಬರುತ್ತ ಇರು-ವವರು! ಕೋಲಿಗೆ ಅಂಗಿ ಹಾಕಿ-ದಂತೆ ಕಾಣಿ-ಸುಲ್ವೇ? ತಲೆಗೆ ಸಿಂಬಿ ಸುತ್ತಿಲ್ಲವೇ! ಆಗೋ ಅಲ್ಲಿ ಈ ಆಲದ ಮರದ ಕೆಳಗೆ. ಕಾಣಿ-ಸಿತೇ; ನಡೆಯು-ತ್ತಿದೆ. ನೋಡು. ಗದ್ದೆಯ ಮಧ್ಯ-ದಲ್ಲಿರುವ "ಹುಷಾರ್ ಕಾಕಾ" ಅಲ್ಲ ಅದು. ಅದು ನಮ್ಮೂರ ಮಾಸ್ತರು.

ಮಾಸ್ತರು ಬಹಾಳ ಶಹಣೆ ಇದ್ದಾರ. ಬಲು ಓದಿ-ದ್ದಾರ. ಓದಿಧ್ಹಾಂಗ ಜೀ-ವನ ನಡಸ್ತಾರ. ನಡಧ್ಹಾಂಗ ಕಣ್ಣೀರು ಹಾಕ್ತಾರ.

ಮಾಸ್ತರು ನಿನಗೆ ದೇವರು. ಹೊಟ್ಟೆ-ಗಿಲ್ಲದ ದೇವರು ಹುಡು-ಗನಿಗೆ ಏನು ಕೊಟ್ಟಾನ ಅಂತ ಕೇಳ-ಬೇಡ. ಹೊಟ್ಟೆ-ಗಿಲ್ಲದೆ ಇದ್ದರೂ, ಜುಟ್ಟಿಗೆ ಮಲ್ಲಿಗೆ ಪೋಣಿಸ್ತಾರ. ಭಾರಿ ಭಾರಿ ವೀರರ ಕಥೇನ! ನಿನಗೆ ಹಸಿ-ವಾದಾಗ ಹೇಳ್ತಾರ. ಭೀಮ-ಸೇನ ಏನೇನು ತಿಂದ ಅದ-ನ್ನೆಲ್ಲಾ ವರ್ಣಿಸ್ತಾರ. ನೆಲ್ಲಿ-ಯಲ್ಲಿ ನೀರು ಬರೋ ಹಾಗೆ ನಿನ್ನ ಬಾಯಿ-ಯಲ್ಲಿ ನೀರು ಬರಿಸ್ತಾರ. ಹೊಟ್ಟೆ ಉರಿ-ಸ್ತಾರ. ಆ ವರ್ಣನೆ ಕೇಳಿ ಅವರಿಗೂ ರೇಗು ಬರ್ತದ. ಆಗ ಯಾರಾ-ದರೂ ಹುಡುಗನ್ನ ಹಿಡಿದು ತದುಕ್ತಾರ. ಆಗ ಪಾಠ ಮುಗಿ-ಧ್ಹಾಂಗ.

ಹೊಟ್ಟೆ ಖಾಲಿ ಇದ್ದರೂ ತಲೇಗೆ ಪೇಟ ಕಟ್ಟು-ತ್ತಾರೆ. ಇದು ಸರ-ಕಾರದ ಕಾನೂನು. ಪೇಟ ಹರಿದು ಹೋದರೆ ಟೋಪಿ ಹಾಕಬಹುದು. ಪರೀ-ಕ್ಷೇಲಿ ಜಯ ಬರ ಬೇಕಾ-ದರೆ ಮಾಸ್ತರ ಮನೇಗೆ ಹೋಗಿ ಪಾಠ ಕಲೀ-ಬೇಕು.

ಮಾಸ್ತರ ಮನೆ-ಯಾಕೆ ಮೆರೀ-ತಾನೆ ಇತ್ರಾಳ. ಹೊಸಾ ಜರಿ ಸೀರಿ ಉಡು-ತಾಳ, ಇಜ್ಜೋಡಿ ವಾಲೆ ಹಾಕಾ-ವ್ಳೇನೆ ಆಕಿ.

ಎಲ್ಲಾ ಅವಳ ತಂದೆ ಮನೆದೇ ಅಂತಾಳ-ಓದು ಚೆನ್ನಾಗ ಕಲಿತಾಂವ ಅಂತ ಇವರಿಗೆ ಕೊಟ್ಟರು. ನನ್ನ ಗತಿ ಹೀಂಗಾತು. ತಂದೆ ಮನೇ ಒಡವೆ ವಸ್ತುವೇ ಉಳೀತು ಅಂತಾಳೆ.

ಹೇಳಿ ಬರೆಯಿಸಿ.—

ಮಾಸ್ತರು	ದೇವರು	ತದುಕು
ಹಸಿವು	ಭೀಮ	ಭಕ್ಷ್ಯ

ನಮ್ಮ ಮಗು ಹೇಳ್ತು

"ಸುಪ್ಪಿಯೆಂದೊರ್ರ್ಯಾರು? ಸುದ್ದಿ ಹೇಳ್ದೋರ್ರ್ಯಾರು?
ನಾನಲ್ಲ ನಮ್ಮ ಮಗು ಹೇಳ್ತು! ಹಲೋ ಹಲೋ ಗೋಳುಲಾಯಿ"

ಎಂದು ಕೊರವ ಕ್ಲಬ್ಬಿನಲ್ಲಿ ಸೂರ್ಯ ಮುಳುಗುವ ಮೊದಲೇ, ಚಂದ್ರನು ಏರುವ ಮೊದಲೇ, ಒಂಟಿಯಾಗಿ ಕೂತು ಮೇಜಿನ ಮೇಲಿದ್ದ, ಬೂದಿಯ ಪಾತ್ರೆಯನ್ನು ತೂಗುತ್ತಾ ಹಾಡುತ್ತಿದ್ದ; ನಾನು ಅವನ ಹಿಂದುಗಡೆಯಿಂದ ಕ್ಲಬ್ಬಿಗೆ ಶನಿವಾರ ಮುಸ್ಸಂಜೆ ಬಂದಾಗ.

"ಅಯ್ಯೋ! ಪಾಪ! ಹೆಂಡಿರಿಲ್ಲದ, ಮನೆಯಿಲ್ಲದ ಕೊರವನಿಗೆ, ಜೋಗುಳದ ಗೀಳೇಕೋ" ಎಂದುಕೊಂಡೇ ಅವನೆದುರಿನ ಕುರ್ಚಿಯಲ್ಲಿ ಕುಳಿತೆ.

"ಏನೋ ಪಲುಕುತ್ತಿದ್ದೆ ಕೊರವಾ" ಎಂದೆ.

ಪ್ರೊಫೆಸರು, ಶಿಷ್ಯ, ಟೆನ್ನಿಸ್ ಪಂದ್ಯ ಆಡುತ್ತಿದ್ದಾರೆ ಅನ್ನಿ. ಶಿಷ್ಯ ಬೇಕಂತ ಸೋಲುತ್ತಿದ್ದಾನೆ ಅನ್ನಿ, ನೋಡಿದವರೆಲ್ಲಾ ಜಾಣ ಹುಡುಗ ಬಾಳಿ ಬದುಕುವ ಚಿಹ್ನೆ ಇದೆ ಅಂತ ತಲೆದೂಗುತ್ತಿದ್ದಾರೆ ಅನ್ನಿ, ಪ್ರೊಫೆಸರು ಏದುಬ್ಬಸ ಪಡುತ್ತಾ ಗೆದ್ದು ಮೆರೆದರು ಅನ್ನಿ—ಆಗ ಶಿಷ್ಯ ಪ್ರೊಫೆಸರ ಮುಖವನ್ನು ಯಾವ ಕನಿಕರದಿಂದ, ಸ್ವಾರ್ಥದಿಂದ ನೋಡುತ್ತಾನೆ ನೋಡಿ, ಹಾಗೆ ನೋಡಿದ ಕೊರವ ಹೀಗಂದ.

"ಒಂಟಿ ಗುಂಡುಗೋವಿಗೆ ಜೋಗುಳ ಯಾಕೆ ಅಂತಲ್ಲವೇ ನಿನಗನ್ನಿಸೋದು, ಇವತ್ತು ಮಧ್ಯಾಹ್ನ ನಿದ್ದೆ ಬಾರದೆ ಸಿನಿಮಾಕ್ಕೆ ಹೋಗಿದ್ದೆ ಅಲ್ಲಿ ಅಮೇರಿಕಾದ ಚಿತ್ರವೊಂದಿತ್ತು. ರಾಕ್ ಅಂಡ್ ರೋಲ್ ನಾಟ್ಯವಾಡಿದರು. ಮನೆ ಪಾಯ ತೋಡುತ್ತಾರೆ ನೋಡು ಮೈಯೆಲ್ಲಾ ತೋರಿಸಿಕೊಂಡು, ನಮ್ಮ ಕಾರ್ಮಿಕ ಬಾಂಧವರು, ಅವರ ನೆನಪಾಯ್ತು. ಇಂತಹ ಕುಣಿತದ ಮೂಲಕಾರಣ ಏನು ಎಂದು ಯೋಚಿಸುತ್ತಾ ಕ್ಲಬ್ಬಿಗೆ ಬಂದೆ. ಈ ತಂದೆ, ಆ ತಾಯಿ, ಓ ಗೆಳೆಯಾ, ಈ ತ್ರಿಕೋಣಮಿತಿಯ ಸಾಕ್ಷ್ಯವನ್ನು ಮಗು ಕೊಟ್ಟದ್ದು—ಸಂಸಾರ ಒಡೆದಿದ್ದು. ಈ ನಾಟ್ಯದಿಂದಲೇ ಸಾಧ್ಯ ಅಂತ ಅನ್ನಿಸಿತು. ಅದಕ್ಕೇ ಈ ಜೋಗುಳ ಹಾಡಿದೆ, ನಮ್ಮ ಮಗು ಹೇಳ್ತು ಸುದ್ದೀನ, ಆನಂತರ ಗೋಳುಲಾಯಿ ಅಂತ, ಅಷ್ಟೇ ಕಣೋ! ಅಂತ ನನಗೆ ಸಮಾಧಾನ ಹೇಳಿದ.

ಭೈರವನ ಭಾಷಣ

ಇನ್ನೂ ಸಾಗೇ ಇತ್ತು ಆತನ ಭಾಷಣ. ಯಾಕಾದರೂ ಈ ಭೈರವರಾಯ ನನ್ನ ತಂದು ಮೈಕಿನ ಮೂತಿಗೆ ಕೊಟ್ಟೆವೋ ಎಂದು ಕೈ ಕೈ ಹಿಸುಕಿಕೊಂಡರು ಕಾರ್ಯದರ್ಶಿ. ನಾಲ್ಕು ತಾಸಾಗಿತ್ತು ಪ್ರಾಣಿ ಜಗ್ಗದೆ ಭೋರ್ಗರೆವ ಜೋಗದ ಜಲಪಾತದಂತೆ ಗುಡುಗುತ್ತಿದ್ದ. ಬ್ರೂಟಸನು ಸೀಸರನ್ನಿಗೆ ಇರಿದಂತೆ ಇರಿಯುತ್ತಿದ್ದ ಕೇಳುತ್ತಿದ್ದ ಜನರನ್ನು.

ನಮ್ಮ ಬೀದಿಯ ನಾಲ್ಕು ಜನ ಸುಮ್ಮನಿರಲಾರದೆ ರಾಮೋತ್ಸವ ಮಾಡುವುದೆಂದು ನಿರ್ಣಯಿಸಿದರು. ದೇವರ ಕಾರ್ಯ ಹತ್ತೂಜನ ಸೇರಿ ಚಪ್ಪರ ಹಾಕಿ ಜಮಖಾನೆ ಹಾಸಿ ರಾಮರ ಪಠದ ಮುಂದೆ ಕೈಮುಗಿದು ಕೂತೇಬಿಟ್ಟರು. ಒಂಭತ್ತು ದಿನದಲ್ಲಿ, ನನ್ನ ಹೆಂಡ್ತಿ ಹಾಡುಗಾರಿಕೆ—ಅಚೆ ಮನೆ ಹುಡುಗರ ಭಜನೆ—ದಾಸರ ಹರಿಕತೆ ಎಲ್ಲಾ ಆಗಿ, ಎರಡು ದಿನ ಖಾಲಿ ಬಿದ್ದಿದ್ದವು. ನನ್ನಾಕೆಯ ಹಾಡುಗಾರಿಕೆ ದಿನ ಅನಿರೀಕ್ಷಿತ ಮಳೆ ಗುಡುಗು ಬಂದು ಜನ ಬರಲಿಲ್ಲ. ಅವತ್ತಿನಿಂದ ಅವಳು ನನ್ನ ಹತ್ತಿರ ಮಾತು ಬಿಟ್ಟಿದ್ದಾಳೆ—ಸಧ್ಯ ನೆಮ್ಮದಿಯಾಗಿದ್ದೀನಿ. ಆದರೆ ಕಾರ್ಯದರ್ಶಿ ಆ ಖಾಲಿಯಾದ ಎರಡು ದಿನದಲ್ಲಿ ಒಂದು ದಿನಕ್ಕೆ ಮತ್ತೆ ಇವಳದೇ ಸಂಗೀತ ಇಡಿಸೋಣ ಎಂದು ಬಂದು ಹೇಳಿದ. "ಅಯ್ಯೋ ಅವತ್ತು ಅವಳು ಹಾಡಿದ್ದಕ್ಕೆ ಗುಡುಗು ಸಿಡಿಲು ಮಳೆ ಗಾಳಿ ಹಾವಳಿ ಪ್ರಾರಂಭಿಸಿದ್ದು ಮತ್ತೇಕೆ ಅದನ್ನ ಸೂಚಿಸ್ತಿಯಾ?" ಎಂದು ಸವಾಲು ಹಾಕಿದೆ. "ನೀನು ಏನಂದ್ಕೋತೀಯೋಂತ ಹಾಗೆ ಹೇಳಿದೆ. ಹಾಗಿದ್ದರೆ ಬೇಡ" ಎಂದು ಅಂದೇಬಿಟ್ಟ ಅವನು. ಇದನ್ನು ಕೇಳಿಕೊಂಡ ನನ್ನಾಕೆ, ನನ್ನ ಮೇಲೆ ಉರಿದೆದ್ದು ತೌರು ಮನೆಗೆ ಹೋಗಿ, ನಮ್ಮ ಇಡೀ ಉತ್ಸವದ ಮೇಲೆ ಸೇಡು ತೀರಿಸಿಕೊಳ್ಳುವ ಹಟವೋ ಎಂಬಂತೆ, ತನ್ನ ಸೋದರ ಮಾವನನ್ನು ಚಪ್ಪರಕ್ಕೆ ಅಟ್ಟಿದಳು.

ಅವನೇ ಭೈರವನ್. ಪ್ರಚಂಡ ಭಾಷಣಪಟು. ಖಾಲಿ ಇದ್ದ ಎರಡು ದಿನ ದೇವರ ಮುಂದೆ ದೀಪ ಹಚ್ಚಿ. ಊದುಬತ್ತಿ ಹೊಗೆ ಹರಡಿ ನಾವೇ "ರಘುಪತಿ ರಾಘವ ಸೀತಾರಾಂ" ಎಂದಿದ್ದರೆ ಚೆನ್ನಿತ್ತು. ಈ ಭೈರವನ ಭೈರಿಗೆ ಕೊರೆತ ಈ ಪಾಟ ಕಿರುಕುಳ ಸಂಕಟ ವ್ಯಥೆ ಕೊಡುತ್ತದೆಂದು ತಿಳಿದಿರಲಿಲ್ಲ.

ಈತನ ಭಾಷಣ ಒಬ್ಬೊಬ್ಬ ಶ್ರೋತೃವಿನ ಮೇಲೆ ಒಂದೊಂದು ರೀತಿ ಪರಿಣಾಮ ಉಂಟುಮಾಡಿರುವುದು ಗಮನೀಯವಾದ ಅಂಶ. ಒಬ್ಬರಿಗೆ 'ಕರುಳಲ್ಲಿ ಮೊಂಡರಗಪ್ಪೆ ಕುಟುಕುತ್ತಾ ಹರಿದಾಡಿದಂತೆ' ಇತ್ತಂತೆ. ಅನೇಕರಿಗೆ ಮೆದುಳ ಒಳಗಡೆ ಜೀರುಗೊಂಬೆಗೆ ಗೆಜ್ಜೆಕಟ್ಟಿ ಬಿಟ್ಟಂತೆ ಆಯ್ತಂತೆ. ಕೆಲವರಿಗೆ—ಸುಡು ಬಿಸಲಲ್ಲಿ ಕಾದ ಹರಿವಾಣದ ಮೇಲೆ ನಿಲ್ಲಿಸಿ ಮೆಣಸಿನಕಾಯಿ ಹೊಗೆ ಹಾಕಿಸಿದ ಅನುಭವವಾಯ್ತಂತೆ. ಹಲವರಿಗೆ ಮುಳ್ಳಿನಾವಿಗೆಯಲ್ಲಿ ಮಲಗಿಸಿ ಸುತ್ತಿಗೆಯಿಂದ ಹೊಡೆದಂತಿತ್ತಂತೆ. ಮತ್ತೆ ಹಲವರಿಗೆ ಶ್ರೀರಾಮನ ಬಾಣಗಳು ಮೈತುಂಬ ನೆಟ್ಟು ಜಾಂಬುವಂತ ಕಿತ್ತು ಮೆಣಸಿನ ಪುಡಿ ತುಂಬಿದಂತೆ ಆಯ್ತಂತೆ. ಹೀಗೆ ಭೈರವನ ರೂಪಿಯಾಗಿ ಬಂದ ಈ ಭಾಷಣಕಾರ ಕಾಡಿದ್ದ.

ನನ್ನಾಕೆ ನಮ್ಮ ರಾಮೋತ್ಸವಕ್ಕೆ ಹೀಗೆ ಇಂತಹ ಏಟು ಕೊಡುವಳೆಂದು ತಿಳಿದಿರಲಿಲ್ಲ. ಈತನ ಮಾತು ಈ ಪಾಟಿ ಪಾಪಾಸು ಕಳ್ಳಿಯ ಸೋಘ ಎಂದು ತಿಳಿದಿದ್ದರೆ ನನ್ನಾಕೆಯ ಸಂಗೀತವನ್ನೇ ಎದುರಿಸಬಹುದಾಗಿತ್ತು ಎಂದು ಈಗ ಅನ್ನಿಸುತ್ತದೆ.

"ಮಹನೀಯರೇ—ಕಡೆಯದಾಗಿ ಇನ್ನು ವಾತ ಶೀತಗಳು ನಾಡಿ ನೋಡಿ ತಿಳಿಯುಬಹುದೇ ಎಂಬ ಬಗ್ಗೆ ವರಹಾ ಮಿಹಿರರು—ಚರಕರೂ ಯಾವ ಧೋರಣೆ ತಾಳಿದ್ದಾರೋ ವಿಚಾರಮಾಡಿ ನೋಡುವ"—ಎಂದು ತೋಳು ಮಡಿಸಿದರು. ಶ್ರೀರಾಮನವಮಿಗೂ ಶೀತಕ್ಕೂ ವಾತಕ್ಕೂ ವರಹಾ ಮಿಹಿರರ ಅಸ್ಪೃನಮಿಗೂ—ಚರಕರ ಅನಾಟಮಿಗೂ ಯಾವ ಸಂಬಂಧವೋ ಆ ಶ್ರೀರಾಮಚಂದ್ರನೇ ಬಲ್ಲ.

"ಶ್ರೀರಾಮನ ಜಾತಕದಲ್ಲಿ ವನವಾಸ ಬರೆದಿದ್ದಂತೆ ನಮ್ಮೆಲ್ಲರ ಜಾತಕದಲ್ಲೂ ಇರಬೇಕು—ಏಕೆಂದರೆ ನಾವೆಲ್ಲಾ ಅನುಭವಿಸುತ್ತಿರುವುದು ವನವಾಸವಲ್ಲದೆ ಮತ್ತೇನು? ನಾವು ಯಾವ ರಾಮರಿಗೆ ಕಡಿಮೆ?—ನಮ್ಮದು ರಾಮರಾಜ್ಯವಲ್ಲವೆ? ....ಹೌದು ಎಂದು ಎದೆ ತಟ್ಟಿ ಈ ತುಂಬು ಸಭೆಯಲ್ಲಿ ಘಂಟಾಘೋಷವಾಗಿ ಸಾರಬಲ್ಲೆ"—ಎಂದು ತಲೆಯ ಮೇಲಿನ ಬಿಳಿಯ ಟೋಪಿ ಸರಿಮಾಡಿಕೊಂಡ.

"ಹಿಂದೆ ನಾನು ಜೈಲಿನಲ್ಲಿದ್ದಾಗ—ಮಹಾತ್ಮಾಜಿಯವರು ಒಂದು ಪತ್ರ ಬರೆದಿದ್ದರು."

—ಸಭೆಯಲ್ಲಿ ಕೂತ ಬೇಜಾರಿಯೊಬ್ಬ ಆಕಳಿಸಿ ಪಕ್ಕದವನ ಕಿವಿಯಲ್ಲಿ, "ಜೈಲಿನಿಂದ ಹೊರಬರಬೇಡ ಅಲ್ಲೇ ಇರು ಎಂದು ಬರೆದಿರಬೇಕು ಮಹಾತ್ಮಾಜಿ" ಎಂದು ಟೀಕಿಸಿದ. ಶ್ರೀರಾಮನವಮಿ ಸಂದರ್ಭದಲ್ಲಿ ಈ ಭೈರವ ಮೂರ್ತಿ ತನ್ನ

ಜೈಲುವಾಸದ ಬಗ್ಗೆ ಏತಕ್ಕೆ ಪ್ರಲಾಪಿಸುವ ಎಂದು ಜನ ಸಂಕಟಪಟ್ಟರು. ಎಲ್ಲಿಗೋ ಹರಿದ ಮಾತಿನ ಝುರಿ, ಅಲ್ಲಿ ಬಳುಕುತ್ತಿಲ್ಲಿ ಬಾಗಿ ಅತ್ತಲಿತ್ತ ಸುತ್ತಿ ಸುಳಿದು ಮತ್ತೆ ತಮ್ಮ ಸ್ವಯಂ ಪುರಾಣದತ್ತಲೇ ಸರಿಯಿತು—(Et tu Brute ?)

"ಮತ್ತೊಮ್ಮೆ ನನ್ನ ಸತ್ವ ಪರೀಕ್ಷೆಯಾದದ್ದು ನೆನಸಿಕೊಂಡರೆ ಸೀತಾಮಾತೆಯರನ್ನು ಶ್ರೀರಾಮಚಂದ್ರ ಅಗ್ನಿ ಪರೀಕ್ಷೆಗೆ ಗುರಿಪಡಿಸಿದ ಪ್ರಸಂಗ ನೆನಪಿಗೆ ಬರುತ್ತದೆ—ಹತ್ತೊಂಬತ್ತ ನೂರಾ ಹನ್ನೆರಡರಲ್ಲಿ ನಡೆದದ್ದು—ಇದು ನಾನೂ ಮೋತೀಲಾಲ್ ನೆಹರೂರವರೂ ಒಂದೇ ಜಹಜಿನಲ್ಲಿ ಲಂಡನ್ನಿಗೆ ಹೊರಟಾಗಿನ ಸುದ್ದಿ" ಬಂತು ಟೀಕಾ ಗುಂಪಿನಿಂದ—

"ಇವಾ ಜಹಜು ಹತ್ತಿದ್ದು ಇವನನ್ನೂ ಅಂಡಮಾನಕ್ಕೆ ಹಾಕಿದಾಗ" ಲಾಯರೊಬ್ಬರ ನುಡಿ.

"ನಮ್ಮ ಅಗ್ನಿ ಪರೀಕ್ಷೆ ಇದು" ಬೇಸರಿಗವಾಣಿ.
ಬೆಂಕಿಗೆ ಹಾಕಿರೋ ಇವನನ್ನು ಸುಟ್ಟುಬಿಡುವ" ಕಮ್ಯೂನಿಸ್ಟ್ ಉವಾಚ.

"ಒಂಬೈನೂರಾ ಹನ್ನೆರಡರಲ್ಲಿ ಇವನು ಇಪ್ಪತ್ತೆಂಟರ ಇಸ್ಪೀಟು ಪ್ರವೀಣನಾಗಿದ್ದ ನನಗೆ ಗೊತ್ತು...." ಎಂದಿತು ಒಂದು ಮುದಿ ಮಾತು.

"ಅಯ್ಯೊ ಮಾತು ಮುಗಿಸಯ್ಯೋ"

"ರೀ; ಸೆಕ್ರೆಟ್ರಿಗಳೇ—ಇದೇನ್ರಿ ಇದೂ—ಈ ಕಠಿಣ ಶಿಕ್ಷೆ ಕೊಡೋಕೇನು ನಾವು ಚಂದಾ ಕೊಟ್ಟಿದ್ದು...."

—ಹೀಗೆ ಗುಸುಗುಸು ಪ್ರಾರಂಭವಾಗಿ ಸಭೆಯ ತಾಳ್ಮೆಯೇ ಅಗ್ನಿಪರೀಕ್ಷೆಗೊಳಗಾಗಿತ್ತು.

"ಸಮಸ್ತ ಚರಾಚರ—ಅಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕನಾದರೂ ಒಂದಲ್ಲ ಒಂದು ಬಾರಿ ನೆಗಡಿಗೆ ಗುರಿಯಾಗಲೇಬೇಕು—ಹಾಗೆ ನೆಗಡಿಯಾದಾಗ ಔಷಧಿ ತೆಗೆದುಕೊಳ್ಳಬೇಕಾಲ್ಲದೆ—ಮೂಗನ್ನೇ ಕೊಯ್ಯಬಾರದು" ಎಂದು ಮುಂದುವರಿದಿತ್ತು ಭಾಷಣ.

"ಸ್ವಾಮಿಾ—ಹೀಗೆ ಜನಗಳನ್ನ ಸತಾಯಿಸೋರ ಕುತ್ತಿಗೇ ಕೊಯ್ಯಬೇಕು ಮೂಗಲ್ಲ—ಕುಂತ್ಕೊಳಯ್ಯೋ"

—ಎಂದಿತು ಒಂದು ಒರಟು ದಪ್ಪ ಗಂಟಲು ಭೈರವರಾಯ ಮತ್ತೂ ಚಾಚಿದ ತನ್ನ ಮೂಗು ನಾಲಿಗೆ ಎರಡನ್ನೂ ಮಸೆದು ಭಂಡ ಬಿಡ ಅವ.

"ಕಡೆಯದಾಗಿ ನಾನು ಹೇಳುವುದಿಷ್ಟೆ—'ನಹಿ ಜ್ಞಾನೇನ ಸದೃಶಂ' ಎಂಬುದನ್ನು ನಾವು ಸರಿಯಾಗಿ ತಿಳಿಯಬೇಕು—ಅಂಗದ ಅಂಗದನೇ—ಜಾಂಬುವಂತ ಜಾಂಬುವಂತನೆ ಆದರೂ ಆಂಜನೇಯನ ಮುಂದೇ ನಾವು ಬಾಲಾ ಆಡಿಸಿದರೆ ತಡೆಯುತ್ತದೆಯೆ ?—ಜ್ಞಾನ ನಹಿ—ಇಲ್ಲ—ಎಂಬುದಕ್ಕೆ ಇದಕ್ಕಿಂತ ಸಾದೃಶ ಬೇಕೆ ? ಇಲ್ಲ ನಹಿ. ಮಹನೀಯರೇ ನನ್ನ ತಂಗಿಯ ಮಗಳ ಹಾಡುಗಾರಿಕೆ ತಾವು ಕೇಳಿದ್ದೀರಿ—ಆಕೆಯ ಯಜಮಾನರು ನಮಗೆ ಬೇಕಾದವರು ಬಂಧುಗಳು—ಅವರೇ ನಮಗೆ ಹೋಗಾ ಬರಾ ಫಸ್ಟ್ ಕ್ಲಾಸ್ ಟಿಕೆಟ್ಟು ಕೊಡಿಸಿ ತಿಂಡಿ ಊಟ ಉಪಚಾರ ಮಾಡಿ ತಮ್ಮ ಮುಂದೆ ನಿಲ್ಲಿಸಿದ್ದಾರೆ."

—ಎಂದಾಗ ಸಭೆ ನನ್ನನ್ನು ಕೆಂಗಣ್ಣಿನಿಂದ ನೋಡಿತು. ನಾನೇ ಈ ಭಾಷಣಕಾರನ ಬಾಣ ಪ್ರಯೋಗಕ್ಕೆ ಕಾರಣ ಎಂದು ತಿಳಿದ ಆ ಜನ ಜುಂಗುಳಿ. "ಹಿಡಿಯಿರಿ—ಕಡಿಯಿರಿ—ಬಡಿಯಿರಿ—ಅವನೇ ನಮ್ಮ ಶತ್ರು ಅವನೇ ನಮ್ಮ ಈ ಯಾತನೆಗೆ ಕಾರಣ ಕೊಲ್ಲಿರಿ—ಕತ್ತು ಕಿಮಿಚಿ" ಎಂದು ನನ್ನನ್ನು ತಿನ್ನುವಂತೆ ಉದ್ರೇಕದಿಂದ ನನ್ನ ಮೇಲೆರಗಿತು. ಆಗ ನಾನು ಭಾಷಣಕಾರನಾದ ನನ್ನ ಹೆಂಡತಿಯ ಸೋದರಮಾವನ ಮುಂದಿದ್ದ ಮೇಜು ಹತ್ತಿ ಉದ್ರಿಕ್ತ ಜನ ಜಂಗುಳಿಗೆ ಹೇಳಿದೆ....ಆಂಟೋನಿ ಹೇಳಿದಂತೆ. "Friends—Indians Countrymen lend Mr. your purses... sorry ears....

I come to bury my wife's Sodaramava not to praise him. The evil that men do lives after him"

—ಎಂದು ಇಷ್ಟೇ ಕಿರುಚಿದೆ. ಸ್ವಾಗತ ಭಾಷಣದಲ್ಲಿ ಈ ಭಾಷಣಕಾರನನ್ನು ಹೊಗಳಿ ಅಟ್ಟಕ್ಕೇರಿಸಿದ ಕಾರ್ಯದರ್ಶಿಯದೇ ತಪ್ಪೆಂದು ಹೇಳಿದೆ. ದಂಡಿನಲ್ಲಿ ಸೋದರ ಮಾವನೆ ? ನೀವೇ ಯೋಚಿಸಿ "Brutus is an Honorable man" ಸತ್ತ ಸೀಸರುಗಳು ನೀವೇ—ಕೊಂದವನು ಯಾರೆಂಬುದನ್ನು ಯೋಚಿಸಿ— "ಎಂದಾಗ ಜನ ಕಣ್ಣು ಬಿಟ್ಟರು. "Methinks there is reason in his sayings" ಎಂದು ಒಪ್ಪಿಕೊಂಡು ಕುರ್ಚಿಯ ಹಿಂದಿದ್ದ ಆ ಮಾತಿನ ಮಲ್ಲ ನನ್ನು ತಡವಿಕೊಂಡರು. ಕಾರ್ಯದರ್ಶಿ ಎಲ್ಲರಿಗೂ ಕೈ ಮುಗಿದು.

"ಮಹನಿಯರೇ—ಶಾಂತಂ—ಶಾಂತಂ—ಇದು ರಾಮೋತ್ಸವ ಸಮಾರಂಭ—ಯುದ್ಧಕಾಂಡಕ್ಕೆ ಒರಬೇಡಿ. ಇಂತಹ ಮಾರೀಚ—ರಾವಣ ಸನ್ಯಾಸಿಗಳಿದ್ದೇ ಇರುತ್ತಾರೆ—ತಾವುಗಳು ವಿವೇಚಿಸಿ ವರ್ತಿಸಿ ನಮ್ಮ ರಸ್ತೆಯ ರಾಮನವಮಿಗೆ ಮರ್ಯಾದೆ ತರಬೇಕು – ನಿಜ ನಮ್ಮದು ತಪ್ಪು ಕಾರ್ಯಕ್ರಮದಲ್ಲಿ ಖಾಲಿ ದಿನ

ಇದೆ ಎಂದು ನಾವು ಈ ರೀತಿ ಇವರನ್ನು ಹಿಡಿದು ತರಬಾರದಾಗಿತ್ತು ನಿಜ—ಬೇರೆ ಯಾರೂ ಒಳ್ಳೆಯವರು ಸಿಕ್ಕದ್ದರಿಂದ ಹೀಗೆ ತಮ್ಮನ್ನು ಯುದ್ಧಕಾಂಡಕ್ಕೆಳೆದುದಾಯಿತು. ರಸಬಾಳೆ—ಕೊಬ್ರಿತುರಿ—ಬೆಲ್ಲ—ಯಾಲಕ್ಕಿ—ಇವುಗಳ ಸಂಯೋಗ ಯಥಾ ಪ್ರಮಾಣದಲ್ಲಾದ ದೊಡ್ಡ ಡಬರಿ ರಸಾಯನ ತಮ್ಮೆಲ್ಲರಿಗೂ ಕಾದಿದೆ."

—ಎಂದಾಗ ಜನ ಶಾಂತವಾಯಿತು. ನಾನು ನನ್ನ ಹೆಂಡ್ತಿ ಸೋದರ ಮಾವನಿಗೆ ವೈಗಾವಲಾಗಿ ನಿಂತೆ. ಜನ "ಪತಿತ ಪಾವನ ಸೀತಾರಾಂ" ಎಂದು ಭಜಿಸುತ್ತಾ ದೊಡ್ಡ ದೊನ್ನೆ ರಸಾಯನದೊಡನೆ ಶಾಂತತೆ ತಂದುಕೊಂಡರು. ಶ್ರೀ ರಾಮ ನವಮಿಯ ಆ ದಿನದ ಕಾರ್ಯಕ್ರಮ ಮಂಗಳ ಹಾಡಿತು. ಆ ರಸಾಯನ ವಿಲ್ಲದಿದ್ದರೆ ಭೈರವರಾಯನ ಗತಿ ಏನಾಗುತ್ತಿತ್ತೊ ? ? ಎಂತಹ ರಾಜ್ಯ—ಎಂತಹ ತಾಳ್ಮೆ—ಧೀರಮಂದಿ.

Antony:—Good Friends, Sweet Friends....I come not, Friends to steal away your hearts :

I am no orator, as Brutus is.

—ದಾಶರಥೀ ದಿಕ್ಷಿತ್

ಬ್ರಿಟಿಷರ ಶಿಲಾ ಪ್ರತಿಮೆಗಳನ್ನು ಸಾರ್ವಜನಿಕ ಸ್ಥಳಗಳಿಂದ ತೆಗೆಸಿ ಮ್ಯೂಸಿಯಮ್ಮಿನಲ್ಲಿಡಬೇಕು ಎಂದು ಸಲಹೆ ಬಂದಿದೆ.

—ಮ್ಯೂಸಿಯಂನಲ್ಲಿಟ್ಟರೆ ಸಾರ್ವಜನಿಕರು ನೋಡೋ ಗೋಜಿಲ್ಲವೆಂದು ಅರ್ಥ ಮಾಡಿಕೊಳ್ಳಬಹುದೇ ?

* * *

ಲೋಕ ಸಭಾ ಸದಸ್ಯರಿಗೆ ವಿಮಾನದ ಪುಕ್ಕಟೆ ಸಂಚಾರಕ್ಕೆ ಅವಕಾಶ ಕೊಡ ಬಾರದು ಎಂದು ಪಂಡಿತಜೀಯವರು ಹೇಳಿದರಂತೆ.

—ಸದಸ್ಯರೆಲ್ಲರೂ ಒಕ್ಕಂಠದಿಂದ ಒಪ್ಪಿ, ನಿಮ್ಮ ಹಾಗೇ ನಮಗೂ ಒಂದು ವಿಮಾನವನ್ನೇ ಮೀಸಲಿಟ್ಟರೆ ಸಾಕು ಎಂದು ಇನ್ನೂ ಹೇಳಲಿಲ್ಲವಂತೆ.

ಹಳ್ಳಿಯುವನ ಆಕ್ವೇರಿಯಂ ಪತ್ರ

ಪಟೇಲ್ ಶಾಮಾಬೋವಿಗೆ, ರಾಮಾನಾಯ್ಕನ ಶರಣಾರ್ತಿ, ಶಾಲೆಸೇರುಕ್ಕೆ ಅಂತ ಈ ಊರಿಗೆ ಬಂದಮೇಲೆ ಮಾಮಾನಾಯ್ಕನ ಮನೆಗೆ ಹೋಗಿದ್ದೆ, ಮೊನ್ನೆ ಶುಕ್ರವಾರ. ಅದೇನು ಪಸಂದೈತಿ ಅಪ್ಪಾ ಆ ಮನೆ ನಮ್ಮ ಕೆರೆ ಕುಂಟೇಲಿ ಶರಹಾವಾರಿ ಹೊಳೆಯೋ ಮೀನುಗಳಿರುಲ್ಲಾ. ಅದೇ ಬಣ್ಣ ಅದೇ ಸೊಗಸಿನ ಆದರೆ ಪುಟಾಣಿ ಮೀನುಗಳನ್ನು ಒಂದು ಗಾಜಿನ ಡಬ್ಬದಲ್ಲಿ ಇಟ್ಟೆದ್ದಾರೆ, ಮಾಮಾನಾಯ್ಕನ ಮನೇಲಿ. ಎಷ್ಟು ಚೆಂದ ಐತಿ ಅಂತೀಪ್ಪಾ !

ದಪ್ಪನಾಗಿ ಜಿರಳೆ ಹಾಗಿರೋದೊಂದು ಅಂಗುಲದುದ್ದ ಮೀನೊಂದು ಐತಿ ಅದರ ಮುಖ ನೋಡಿದರೆ ನಮ್ಮ ಶಾನುಭೋಗರ ಜ್ಞಾಪ್ತಿ ಬರ್ತೈತಪ್ಪಾ. ಅವರ್ಹಂಗೇ ಇತ್ತ ಅತ್ತ ಅಲೆದಾಡುತ್ತಪ್ಪ. ಮಿಕ್ಕೆಲ್ಲಾ ಮೀನನ್ನು ಹೆದರಿಸುತ್ತಪ್ಪ. ಅದರ ರೆಕ್ಕೆ ನೋಡಿದರೆ, ನಮ್ಮ ಶಾನುಭೋಗಪ್ಪ ಓಡಾಡಿದಾಗ ಅಂಗಿ ಜೇಬು ಗಾಳಿಗೆ ಹಾರಾಡುತ್ತಲ್ಲಪ್ಪಾ, ಹಾಂಗೇ ಇರ್ತೈತಿ.

ಪುಟಾಣಿ ಮೀನು ರಂಗುರಂಗಿನದವೂ ಮೂರು ನಾಲ್ಕು ಐತಪ್ಪ ಪುಣಕ ಪುಣಕ ಅಂತ ಇತ್ತ ಅತ್ತ ಎಗರ್ಲಾಡ್ತಿರುತ್ತೆ, ನಮ್ಮ ಹಳ್ಳಿ ಇಸ್ಕೂಲಿಗೆ, ಹೊಸ ಮ್ಯಾಡಂ ಬಂದಿಲ್ಲಾ, ವೆರೊನಿಕಾಮ್ಮ, ಅವಳ್ಹಂಗೆ ಇವೆ ಅಪ್ಪಾ. ಏನು ಥಳುಕು ಅಂತೀ. ಮಾಮಾನಾಯ್ಕ ದೀಪ ಹಚ್ಚಿ ಗಾಜಿನ ಡಬ್ಬಕ್ಕೆ ಬೆಳಕು ತುಂಬಿದ ಅಪ್ಪಾ. ಆ ಕತ್ತಲೆ ಬೆಳಕಲ್ಲಿ ಅದೇನು ಚಂದ ಅಂತೀ ನೋಡಕ್ಕ. ಕಣ್ಣಾರೆಪ್ಪೆ ಹಾರಿಸ್ದೆ ನೋಡುವಾ ಅಂತನ್ನಿಸ್ತು. ಬಾಯಿಗೆ ಅದರ ಬಾಯಿ ತಾಕಿಸೋಣವಾ ಅಂತ್ಲೂ ಅನ್ನಿಸ್ತು. ನೀಬಂದು ನೋಡಬೇಕು ಅಪ್ಪಾ. ಗಾಜಿನ ಡಬ್ಬಕ್ಕೆ ನಿನ್ನ ಮೀಶೇನ ಅಂಟಸೇ ಬಿಡ್ತಿ. ಅಷ್ಟು ಮುದ್ದಾಗಿವೇಪ್ಪ.

ಇನೊಂದು ನೇರಳೆ ಬಣ್ಣದ ಮೀನೊಂದಿದೇಪ್ಪಾ. ಫೈಟರ್ ಅಂತಲಂತೇ ಆದರ ಹೆಸರು. ಘೆಂಡಾ ಮೃಗಕ್ಕೆ ಕತ್ತಿನ ಮೇಲೆ ಕತ್ತಿ ಹಾಗಿರುಲ್ವ, ಹಾಗೆ ಇದರ ಬೆನ್ನಮೇಲೂ ಒಂದು ಕೋಡಿದೇಪ್ಪಾ. ಎಷ್ಟು ಪಸಂದಾಗಿ ಆದು ಕತ್ತಿವರಸೆ ಮಾಡುತ್ತೀ ಅಂತೀಪ್ಪಾ ! ನಮ್ಮ ನೀಗ್ರಂಟಿ ಇಲ್ಲಾ ಸಬೈೀವಾರ್ಸಿಯೋರು ನಮ್ಮ

ಹಳ್ಳೀಗೆ ಬಂದಾಗ ಆ ನೀರ್ಗಂಟಿ ಕುಣಿತಾ ಹಾಕ್ತಾನ್ನೋಡು. ಹಂಗೇ ಹಾಕುತ್ತ್ರಪ್ಪ ಈ ಫೈಟರು. ಅದನ್ನು ಕಂಡೇ ಅದಕ್ಕೆ ದಾರಿ ಬಿಟ್ತಾವೆ ಮಿಕ್ಕೆಲ್ಲಾ ವಿಮಾನುಗಳು.

ತಳದಲ್ಲೇ ಮರಳ ಮೇಲೇ ಸಾವಿರ ಕಾಲ್ನಾಂಗ ಇನ್ನೊಂದು ಲಂಬಾನೇ ವಿಮಾನು ಓಡಾಡ್ತಿರುತ್ತ್ರಪ್ಪಾ. ಧಟಕ್ಕನೆ ಮೇಲಕ್ಕೆ ಸುಳೀರ್ ಅಂತ ಹಾರಿ ಧಢೀರ್ ಅಂತ ಇಳಿದು, ಸುಳಿದಾಡುತ್ತ್ರಪ್ಪ. ನಮ್ಮ ಹಳ್ಳಿ ಇಸ್ಕೂಲು ಮಾಸ್ತರಿಲ್ವಾ, ಅವರ್ಹಂಗೇನೇ ! ಇನಿಸ್‌ಪೆಕ್ಟರು ಬಂದಾಗ ಸುಳಿರ್ ಫಳೀರ್ ಅಂತ ಎಗರಾಡುಲ್ವ ಹಂಗೇ ಎಗರಾಡುತ್ತ್ರಪ್ಪ. ಒಂದು ಅರೆಕ್ಷಣ, ಮತ್ತೆ ನೆಲಕ್ಕೆ ಬಿದ್ದು ಸದಾಕಾಲಾನೂ ಮಣ್ಣು ಮುಕ್ತಾ ಇರುತ್ತ್ರಪ್ಪ. ಅಯ್ಯೋ ಪಾಪ ಅಂತ ಅನ್ನಿಸುತ್ತೆ.

ಬಾವಲಿ ತರಹ ಇನೊಂದು ಅಗಲವಾದ ವಿಮಾನಿದೇಪ್ಪಾ ನಮ್ಮ ಹಳ್ಳಿ ಹಾರುವಯ್ಯ ತಿಥಿ ಊಟಮಾಡಿ ಬತ್ತಾನೆ ನೋಡು ಹಾಗೆ. ತೇಲಿಕೊಂಡೇ ಮೆಲ್ಲಗೆ ಸಾಗ್ತ್ರದಪ್ಪಾ. ನೋಡುಕ್ಕೆ ಚಂದ ಮೊರದ ಹಾಗಿದೇಪ್ಪ ಪಕ್ಕದ ಕಡೆಯಿಂದ ನೋಡಿದರೆ, ನೇರನೆ ಕಂಡರೆ ಕಡ್ಡಿ ಪೈಲ್ವಾನ್.

ಅಪ್ಪಾ ! ಈ ಸಾರಿ ರಜೆಗೆ ಹಳ್ಳಿಗೆ ಬರೋವಾಗ ಇಂತಹದೇ ಒಂದು ಗಾಜಿನ ಡಬ್ಬ ವಿಮಾನು ಎಲ್ಲಾ ತರುತ್ತೀನಪ್ಪ, ಮೂವತ್ತೇ ರೂಪಾಯಿಂತೆ. ಬರೋಕ್ಮುಂಚೆ ಬರೀತಿನಿ ಹಣ ಕಳಿಸಪ್ಪಾ !

ಅಮ್ಮನಿಗೂ ಹೇಳಪ್ಪಾ ವಿಮಾನಿನ ವಿಚಾರಾನ. ನಾನು ಚೆನ್ನಾಗಿವ್ನಿ.

ಕಲ್ಯಾಣಪುರಿ
೨೨—೧೦—೫೮

ನಿಮ್ಮಗ
ರಾಮುನಾಯ್ಕ

ಶ್ರೀ ಆರ್. ಎಸ್. ಸಿಂಗ್‌ರವರ ರಾಜೀನಾಮೆಯನ್ನು ಪಂಡಿತಜೀಯವರು ಒಪ್ಪಲಿಲ್ಲವಂತೆ.

—ರಾಜೀನಾಮೆ ಕೊಡೋ ಸ್ವಾತಂತ್ರ್ಯ ಕೂಡ ಕಾಂಗ್ರೇಸ್ ಸದಸ್ಯರಿಗಿಲ್ಲ ಎಂದು ಕಮ್ಯೂನಿಸ್ಟರು ಟೀಕೆ ಮಾಡಿಲ್ಲವಂತೆ.

ನಾನು ಚಂದ್ರಲೋಕಕ್ಕೆ

ರಸ್ಯಾ, ಅಮೇರಿಕಾ ದೇಶದ ಜನಗಳು ಚಂದ್ರಲೋಕಕ್ಕೆ ಈಗಾಗಲೇ ಹೊರಟು ನಿಂತಿದ್ದಾರೆ. ನಮ್ಮ ದೇಶದವರು ಅದರಲ್ಲಿಯೂ ಮುಂದರಿಯದ ಕನ್ನಡಿಗರು ಸುಮ್ಮನೆ ಇರಲು ಬಂದೀತೆ? ಸಾಧ್ಯವಿಲ್ಲದ ಮಾತು ಅದು. ಹಾಗೆಂದೇ ಮೈಸೂರಲ್ಲಿ ಒಂದು ರಾಕೆಟ್ ಹಾರಿಸಿದರು. ಅದು ಜಬ್ಬಲಾಪುರದ ತನಕ ಹೋಯಿತು. ತುಂಬ ಸಂತೋಷದ ಕೆಲಸ. ಈ ವಿಚಾರದಲ್ಲಿ ಈಗಾಗಲೇ ನನ್ನ ಮನಸ್ಸು ಚಂದ್ರಲೋಕಕ್ಕೆ ಧಾವಿಸಿದೆ! ಈ ನನ್ನ ಭೌತ ಶರೀರ ತುಸು ಹಿಂದೆ ಉಳಿದಿದೆ. ತುಸು ಎಂದರೆ ತುಸುವೇ—ಎರಡೂವರೆ ಲಕ್ಷ ಮೈಲಿನಷ್ಟಿದ್ದೀತು.

ನನಗೇಕೆ ಆ ಅವಸರ ಎಂದು ಕೆಲವರಿಗೆ ಸಂಶಯ ಬಂದೀತು. ಕನ್ನಡಿಗರ ಕೀರ್ತಿ ಧ್ವಜ ಅಲ್ಲಿ ಹಾರಿಸಬೇಕು; ಇಲ್ಲಿ ಅಂದರೆ ನಮ್ಮ ರಾಜಧಾನಿಯಲ್ಲಿ ಹಾರಾಡಲು ವಾತಾವರಣದ ಅಡಚಣೆ ಬಹಳ ಇದೆ. ಇಲ್ಲಿನ ವಾತಾವರಣ ಚೆನ್ನಾಗಿಲ್ಲ, ಚಂದ್ರಲೋಕದಲ್ಲಿ ಇಷ್ಟಿಷ್ಟೂ ವಾತಾವರಣ ಇಲ್ಲ. ಅಲ್ಲಿ ಕನ್ನಡಾಂಬೆಯ ಬಾವುಟ ಹಾರಿಸಬಹುದಲ್ಲ—ಎಂಬ ಲವಲವಿಕೆ. ನಾವೇ ಮೊದಲು ಅಲ್ಲಿಗೆ ಹೋಗಿಬಿಟ್ಟರೆ, ನಮ್ಮದೇ ಮಂತ್ರಿಮಂಡಲ, ಪಕ್ಷ, ಪಾರ್ಟಿಗಳನ್ನು ಕಟ್ಟಿ, ಇನ್ನೊಂದು ಜನ ಮಿಸುಕದ ಹಾಗೆ ಮಾಡಬಹುದು – ಎಂಬ ಯೋಚನೆ. ಹೋದೊಡನೆಯೇ ಪಂಚಶೀಲವನ್ನು ಕೊಂಚ ಕೊಂಚವಾಗಿಯಲ್ಲ, ಸಂಪೂರ್ಣವಾಗಿ ಸಾರಿಸಿಬಿಟ್ಟೆವು ಎಂದರೆ ಯುದ್ಧಾತುರರಾದ ರಸ್ಯ, ಅಮೆರಿಕ— ಎರಡು ದೇಶದವರೂ ಅಲ್ಲಿ ಕಾಲಿರಿಸಲಾರರು. ಅವರು ಮಂಗಳ ಗ್ರಹಕ್ಕೋ, ಅಮಂಗಳ ಗ್ರಹಕ್ಕೋ ಹೋಗಲಿ.

ಅಂತೂ—ಕನ್ನಡದ ಜನ ಅಲ್ಲಿಗೆ ಹೋಗಿ ಮೊದಲು ಕಾಲೂರಬೇಕು. ಕಾಲೂರಿ, ಬೇರೂರಿದಮೇಲೆ ನಮ್ಮನ್ನು ಯಾರ್ಯಾರೂ ಕದಲಿಸಲಾರರು—ಎಂಬುದು ಖಂಡಿತ. ನ್ಯಾಯ ನೀತಿಗೂ ಸಹ ಕದಲದ ನಾವು, ಈ ರಷ್ಯ ಅಮೇರಿಕದವರಿಗೆ ಕದಲುತ್ತೇವೆಯೇ? ಇಲ್ಲ—ಖಂಡಿತಕ್ಕೂ.

ಈಗ ನಮಗೆ ಬೇಕಾದದ್ದು ರಾಕೆಟ್ಟು. ಅದಕ್ಕೆ ಬೇಕಾದ ಉರುವಲು ನಮ್ಮ ಹೊಟ್ಟೆಯಲ್ಲೇ ಇದೆ. ಯಾರನೆ ಕಂಡರು, ಬುದ್ಧಿಯುಳ್ಳ ಯಾರನೇ ನೆನೆದರು ಹೊಟ್ಟೆ ಉರುವಲು ನಮ್ಮಲ್ಲಿರುವುದರಿಂದ ಬೇರೆ ಒಂದು ರಾಕೆಟ್ಟು ನಮಗೆ ಬೇಕಾಗ

ಲಾರದು. ನಮ್ಮ ಆಂತರಿಕ ಉರುವಲೇ ನಮ್ಮನೇ ಸಶರೀರಿಯಾಗಿ ಮೇಲಕ್ಕೆ ಒಯ್ದು ಚಂದ್ರಲೋಕಕ್ಕೆ ಸಾಗಿಸಿ ಬಿಡುವುದು ಖಂಡಿತ. ಇನ್ನೂ, ಅಲ್ಲಿಗೆ ಹೋದ ಮೇಲೆ ಏನು ಮಾಡಲಿ—ಎಂಬ ಯೋಚನೆ ಅಲ್ಲವೇ ? ಅಯ್ಯೋ, ಇದ್ದಾಗ ಏನು ಮಾಡಲಿ ಎಂಬ ಯೋಚನೆಯೇ ಬಾರದ ನಮ್ಮ ಜನಕ್ಕೆ, ಹೋದಮೇಲೆ ಏನೇನೂ ಯೋಚನೆ ಬರಲಾರದು.

ನನಗಿರುವ ಒಂದು ಭಯ ಹೇಳಬಹುದೇ. ಇದು ನನ್ನ ಯೋಚನೆಯಾದುದರಿಂದ ಹೇಳುತ್ತೇನೆ. ನನ್ನ ತಂದೆ, ತಾಯಿ ಬ್ರಾಹ್ಮಣ ವರ್ಗಕ್ಕೆ ಸೇರಿದ್ದರಿಂದ, ಹಿಂದುಳಿದವರನೇ ಬಿಟ್ಟು ನೀನು ಹ್ಯಾಗಯ್ಯ ಹೊರಡುವುದು—ಎಂಬ ತಕರಾರು ಬಂದೀತೇ—ಎಂದು. ಇನ್ನು ಅಲ್ಲಿಗೆ ಹೋದಮೇಲೆ— ಅಲ್ಲಿರುವ ಜನ ಯಾವ ಕೋಮಿನವರು—ಎಂದು ತಿಳಿಯದಿರುವುದು ಇನ್ನೊಂದು. ಆದರೆ ನಾನು ಕೇಳಿದ ವದಂತಿ ಮೇರೆಗೆ—ಇಲ್ಲಿನ ನಮ್ಮ ಜನ ರಾಜಕೀಯ ಪಕ್ಷವನ್ನೇ ಅನುಕೂಲಕ್ಕೆ ತಕ್ಕಂತೆ ಬಿಟ್ಟು ಹಿಡಿಯುವ ಹಾಗೆ, ಅಲ್ಲಿನವರು ಜಾತಿ, ಕೋಮನೇ ಬಿಡುತ್ತಾರೆ ಎಂದು—ಅಲ್ಲಿನ ಸಂಕಟನೆಯೇ ಹಾಗೆ ಎಂದು ಕೇಳಿದ್ದೇನೆ. ಹೀಗಾಗಿ ಆ ಭಯವೂ ಇಲ್ಲ.

ಇನ್ನು ಹೊಟ್ಟೆ ಉರುವಲನ್ನೆ, ವ್ಯಾಕ್ಸಿಮಂ ಕಾವಿಗೆ ಏರಿಸಿ, ಸಶರೀರಿಯಾಗಿ ಚಂದ್ರಲೋಕಕ್ಕೆ ಹೊರಡುವುದೊಂದೇ ಬಾಕಿ. ಹೇಳದೆ ಹೋಗುವುದು ನ್ಯಾಯವಲ್ಲ; ನಾಳೆ ನೀವು ನನ್ನನ್ನು ಇಲ್ಲಿ ಕಾಣದೆ ಒಬ್ಬ ಸಾಯಿತಿ ಹೋದನಲ್ಲ—ಎಲ್ಲಿಗೆ ? ಎನ್ನಬಾರದೆಂದು ಹೀಗೆ ಬರಕೊಂಡಿದ್ದೇನೆ.

—**ಶಿವರಾಮ ಕಾರಂತ.**

ಉತ್ಥಾನ ದ್ವಾದಶೀಗೆ, ಹೊಸ ಸೀರೆ ಕೊಂಡುಕೊಳ್ಳಬೇಕೋ ಹೊಸ ಪಾತ್ರೆ ತೆಗೆದುಕೊಳ್ಳಬೇಕೋ ಎನ್ನುವುದನ್ನು ತೀರ್ಮಾನಿಸಲು ನಮ್ಮಾಕೆ ಶಿಖರ ಸಮ್ಮೇಳನ ನಡೆಸಲು, ತೌರಿಗೆ ಹೋದವಳು ಇನ್ನೂ ಹಿಂತಿರುಗಿಲ್ಲ ಎಂದೊಬ್ಬ ವಾಚಕರು ಬರೆದಿದ್ದಾರೆ.

—ಪುಣ್ಯವಂತ ! ವಾಚಕ !!


* * *

ಸೊಸೈಟಿಗಳ ರೆಜಿಸ್ಟ್ರೇಷನ್ ಕಾನೂನು ಮಾರ್ಪಾಡಾಗಿ ಪಾಸಾಗಿದೆಯಂತೆ.
—ನಮ್ಮ ಸ್ಥಳೀಯ ಸೆಕ್ರೆಟರಿಗಳು ರಾಜೀನಾಮೆ ಕೊಟ್ಟದಾರೆ.

(ಪಕ್ಷಾಪಕ್ಷದ ಸುದ್ದಿ)



ಒಮ್ಮೆ ಉಪಯೋಗಿಸಿ ನೋಡಿ
ಎಷ್ಟು ಸುಂದರ ಉಜ್ವಲ ಪೇಯಿಂಟು!
ಪರೀಕ್ಷಿಸಲು "ಬೇಬಿ" ಸೈಜ್ ¼ ಪೈಂಟ್ ಟನ್ನಿನೊಳಗೆ ದೊರೆಯುತ್ತೆ
ಷಾಲಿಮಾರ್ ಸೂಪರ್‌ಲ್ಯಾಕ್
ಸಿಂಥೆಟಿಕ್ ಎನಾಮೆಲ್
ಇದೊಂದು ಶೀಘ್ರದಲ್ಲಿ ಗಟ್ಟಿಯಾಗಿ ಒಣಗುವ, ಬಹಳವಾಗಿ ಥಳಥಳಿಸುವ, ನಿಶ್ಚಿತ ಬಾಳಿಕೆಯಿರುವ, ಒಳಭಾಗಕಕ್ಕೂ ಅಥವಾ ಹೊರಭಾಗಕ್ಕೂ ಉಪಯೋಗಿಸಬಹುದಾದ ಪೇಯಿಂಟಾಗಿದೆ. ಇದನ್ನು ಮನೆಯಲ್ಲಿಯ ಮತ್ತು ಕಾರ್ಖಾನೆಯಲ್ಲಿಯ ಎಲ್ಲಾ ತೆರನಾದ ಜಾಗಗಳ ಮೇಲೆ ಬ್ರಶ್ಶಿನಿಂದ ಬಳಿಯಬಹುದು, ಸ್ಪ್ರೇ ಮಾಡಬಹುದು ಅಥವಾ "ಡಿಪ್" ಮಾಡಿ ಹಚ್ಚಬಹುದು.
38 ಬಣ್ಣಗಳು—ಒಂದರೊಂದಿಗೆ ಮತ್ತೊಂದನ್ನು ಕಲಸಬಹುದು! ¼ ಪೈಂಟ್ ಮತ್ತು 1 ಗ್ಯಾಲನಿನ ಟನ್ನುಗಳಲ್ಲಿ ಹಾಗೂ 5 ಗ್ಯಾಲನಿನ ಡ್ರಮ್ಮುಗಳಲ್ಲಿ ದೊರೆಯುತ್ತೆ.
SPW 458
SHALIMAR PAINT, COLOUR & VARNISH CO., PRIVATE LTD.,
CALCUTTA • BOMBAY • MADRAS • NEW DELHI • KANPUR


VITOFERRIN
MYSORE INDUSTRIAL & TESTING LABORATORY LTD MALLESWARAM BANGALORE

REG. NO. M. 4718 KORAVANJI. DEC. 1958

Printed by B. S Iyengar, Bangalore City
Publisher—B N. Gupta Editor—M Sivaram